# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:209 • ನೋಂದಣಿ ನಂ.:KARKAN27911 • ವಿಜಯನಗರ • 13.01.2024 • ಶನಿವಾರ • ಪುಟ:04 • ಬೆಲೆ:2

Volume:01 • Issue:209 • Reg.No:KARKAN27911 • VIJAYANAGARA • 13.01.2024 • Saturday • Page:04 • Rs:2


# ಬಸ್ ನಿಲ್ದಾಣಗಳು ಅನುದಾನ ಬಳಕೆಗಷ್ಟೇ!

## ನಿಲ್ದಾಣದಲ್ಲಿ ನಿಲ್ಲದ ಬಸ್‌ಗಳು, ಕಾದು ಹೈರಾಣಾದ ಪ್ರಯಾಣಿಕರು, ಪ್ರವಾಸಿಗರು | ಆಡಳಿತ ವ್ಯವಸ್ಥೆಯನ್ನೆ ಅಣಕಿಸುತ್ತಿವೆ ನಿಲ್ದಾಣಗಳು

■ **ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವಜನಿಕರಿಗೆ ಉಪಯೋಗಕ್ಕೆಂದೇ ನಗರದ ನಾನಾ ಕಡೆ ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ಡಿಎಂಎಫ್(ಜಿಲ್ಲಾ ಖನಿಜ ನಿಧಿ) ಅನುದಾನದಿಂದ ಸುಂದರ, ಸುಸಜ್ಜಿತವಾಗಿ ನಿರ್ಮಿಸಿರುವ ನಗರ ಬಸ್ ತಂಗುದಾಣಗಳು ಕೇವಲ ಅನುದಾನ ಬಳಕೆಗೆ ಎಂಬಂತಾಗಿದೆ.

ರಸ್ತೆಬದಿಯ ಬಸ್ ನಿಲ್ದಾಣಗಳಲ್ಲಿ ನಗರ ಸಾರಿಗೆ ಬಸ್‌ಗಳು ಸಹ ನಿಲ್ಲಿಸದೇ ಹೋಗುತ್ತಿದ್ದು, ಬಸ್‌ಗಾಗಿ ಕಾದು ನಿಂತ ಪ್ರವಾಸಿಗರು ಆಡಳಿತ ವ್ಯವಸ್ಥೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಹಂಪಿ ರಸ್ತೆಯಲ್ಲಿ ನಿರ್ಮಿಸಿರುವ ಹಂಪಿ ಕ್ರಾಸ್ ಸಾರಿಗೆ ನಿಲ್ದಾಣದಲ್ಲಿ ದೇಶ, ವಿದೇಶಿ ಪ್ರವಾಸಿಗರು ಬಸ್ಸಿಗಾಗಿ ಕಾದು ನಿಂತು ಸುಸ್ತಾಗುತ್ತಿದ್ದಾರೆ. ಈ ಮಾರ್ಗದಲ್ಲಿ ಸಾಗುವ ಅನೇಕ ಸಾರಿಗೆ ಬಸ್‌ಗಳಿಗೆ ಕೈ ಮಾಡಿದರೂ ಚಾಲಕರು ನಿಲ್ಲಿಸದೇ ಹೋಗುತ್ತಿರುವುದು ಕಂಡುಬಂದವು. ಬಸ್ ನಿಲ್ದಾಣವೆಂದು ನಾಮಫಲಕ ಕಾಣಿಸುವುದರಿಂದ ಊರಿಗೆ ಬಂದ ಹೊಸಬರು ಸೇರಿದಂತೆ ಹಂಪಿಗೆ ತೆರಳುವ ವಿದೇಶಿಗರು ಹಂಪಿ ಕ್ರಾಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುವುದು ಸಹಜ. ಆದರೆ ಬಸ್‌ಗಳೇ ಆ ನಿಲ್ದಾಣದಲ್ಲಿ ನಿಂತ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಕನಿಷ್ಠ ಸೌಜನ್ಯವೂ ಬಸ್ ಚಾಲಕ–ಕಂಡಕ್ಟರಿಗಿಲ್ಲ. ಈ ಮಾರ್ಗದಲ್ಲಿ ತೆರಳುವ ಬಸ್‌ಗಳು ಒಂದೆರೆಡು ನಿಮಿಷ ಬಸ್ ನಿಲ್ಲಿಸಲು ಆರಂಭಿಸಿದರೆ ಜನರು ಅಲ್ಲಿ ಬಸ್ಸಿಗಾಗಿ ಕಾದು ನಿಲ್ಲಲು ಆರಂಭಿಸುತ್ತಾರೆ. ರಾತ್ರಿವೇಳೆಯೂ ಬಸ್ ನಿಲ್ದಾಣದಲ್ಲಿ ವಿದ್ಯುತ್ ಸೌಲಭ್ಯಗಳಿಲ್ಲದಂತಾಗಿದ್ದು, ಕುಡುಕರ ಅಡ್ಡವಾಗಿ ಬದಲಾಗುತ್ತಿದೆ. ಸರ್ಕಾರಕ್ಕೆ ಪರೋಕ್ಷವಾಗಿ ಶಕ್ತಿ ಯೋಜನೆಯಡಿ ಹಣ ಹರಿದು ಬರುತ್ತಿರುವುದರಿಂದ ಪ್ರಯಾಣಿಕರ ಗೋಳು ಕೇಳುವವರಿಲ್ಲದಂತಾಗಿದೆ ಎನ್ನುತ್ತಿದ್ದಾರೆ ಪ್ರಯಾಣಿಕರು.

ವಿಶ್ವಪಾರಂಪರಿಕ ತಾಣ ಹಂಪಿಯನ್ನು ನೋಡಬೇಕೆಂದು ದೇಶ, ವಿದೇಶಗಳಿಂದ ಹಂಪಿಯ ಹೆಬ್ಬಾಗಿಲು ಹೊಸಪೇಟೆ ನಗರಕ್ಕೆ ಆಗಮಿಸುತ್ತಾರೆ. ನಗರದ ಅಲ್ಲಲ್ಲಿ ಸುಂದರ ಬಸ್ ನಿಲ್ದಾಣ ನಿರ್ಮಿಸಿ ಅದರ ಮೇಲೆ ಬಸ್ ನಿಲ್ದಾಣವೆಂದು ಬರೆಯಲಾಗಿದೆ. ಭಾಷೆಯ ಸಮಸ್ಯೆಯಿಂದಾಗಿ ವಿದೇಶಿ ಪ್ರವಾಸಿಗರು ಸೂಚನಾ ಫಲಕ ಅಥವಾ ನಾಮ ಫಲಕಗಳನ್ನು, ಗೂಗಲ್ ಮ್ಯಾಪ್‌ಗಳ ಮೂಲಕ ತಂಗುದಾಣಗಳನ್ನು ಹುಡುಕಿ ಅಲ್ಲಿಗೆ ಬಂದು ಬಸ್ಸಿಗಾಗಿ ಕಾಯುವುದು ಸಹಜ. ಗಂಟೆ ಗಟ್ಟಲೆ ಕಾದವರ ಸಮಯವೂ ವ್ಯರ್ಥವಾಗುತ್ತಿದೆ.









ಇದ್ದ ಸೌಕರ್ಯಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸಲಾಗದಿರುವುದು ಇಲ್ಲಿನ ಆಡಳಿತ ವ್ಯವಸ್ಥೆಯನ್ನು ಅಣಕಿಸುವಂತಿದೆ. ಕೂಡಲೇ ಸಂಬಂಧಪಟ್ಟವರು ನಗರದ ವಿವಿಧೆಡೆ ಬಸ್ ನಿಲುಗಡೆಗಾಗಿ ನಿರ್ಮಿಸಲಾದ ಬಸ್ ನಿಲ್ದಾಣಗಳ ಬಳಿ ಸಾರಿಗೆ ಬಸ್‌ಗಳನ್ನು ನಿಲ್ಲಿಸಿ, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಯಾಣಿಕರ ಆಗ್ರಹವಾಗಿದೆ.

---

**ಮೈಕ್ರೋ ನ್ಯೂಸ್**

## ಜ.15 ರಿಂದ ಟ್ರಾಮಾಕೇರ್‌ನಲ್ಲಿ ಮೂತ್ರಕೋಶ ವಿಭಾಗ ಆರಂಭ

**ಹಂಪಿ ಟೈಮ್ಸ್ ಬಳ್ಳಾರಿ**

ರೋಗಿಗಳಿಗೆ ಸಮರ್ಪಕ ರೀತಿಯಲ್ಲಿ ಚಿಕಿತ್ಸೆ ಹಾಗೂ ಆಡಳಿತಾತ್ಮಕ ದೃಷ್ಠಿಯಿಂದ ಸುವಿಶೇಷ ವಿಭಾಗವಾದ ಮೂತ್ರಕೋಶ ವಿಭಾಗವನ್ನು ಜ.15 ರಿಂದ ಟ್ರಾಮಾಕೇರ್ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗುವುದು ಎಂದು ವಿಮ್ಸ್ ನಿರ್ದೇಶಕ ಮತ್ತು ಡೀನ್ ಡಾ.ಗಂಗಾಧರ ಗೌಡ ಅವರು ತಿಳಿಸಿದ್ದಾರೆ.

ಮೂತ್ರಕೋಶಕ್ಕೆ ಸಂಬಂಧಿಸಿದ ಕಾಯಿಲೆಗೆ ಚಿಕಿತ್ಸೆ ಪಡೆಯಲು ಉದ್ದೇಶಿಸಿರುವ ರೋಗಿಗಳು ಇನ್ನು ಮುಂದೆ ಟ್ರಾಮಾಕೇರ್ ಆಸ್ಪತ್ರೆಗೆ ಭೇಟಿ ನೀಡಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಳ್ಳಾರಿ ಮಹಾನಗರ ಪಾಲಿಕೆಯ ನೂತನ ಮಹಾಪೌರರಾಗಿ ಬಿ.ಶ್ವೇತಾ ಅಧಿಕಾರ ಸ್ವೀಕಾರ



**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಮಹಾನಗರ ಪಾಲಿಕೆಯ ನೂತನ ಮಹಾಪೌರರಾಗಿ ಬಿ.ಶ್ವೇತಾ ಅವರು ಶುಕ್ರವಾರ ಅಧಿಕಾರ ಸ್ವೀಕಾರ ಮಾಡಿದರು.

ಮಹಾನಗರ ಪಾಲಿಕೆಯ ಮೇಯರ್ ಕಚೇರಿ ಸಭಾಂಗಣದಲ್ಲಿ ನೂತನ ಮೇಯರ್ ಆದ ಬಿ.ಶ್ವೇತಾ ಅವರು ದಾಖಲಾತಿಯಲ್ಲಿ ಸಹಿ ಹಾಕುವುದರ ಮೂಲಕ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್‌ಸಾಬ್ ಅವರು ಹೂ ಗುಚ್ಛ ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಪಾಲಿಕೆಯ ಸದಸ್ಯರು, ಜನಪ್ರತಿನಿಧಿಗಳು ಹಾಗೂ ಪಾಲಿಕೆಯ ಅಧಿಕಾರಿಗಳು ಹಾಜರಿದ್ದರು.

> ಮೈಮೇಲೆ ಹರಿದ ಬಟ್ಟೆ
> ಇದ್ದರೂ ಚಿಂತೆಯಿಲ್ಲ,
> ಕೈಯಲ್ಲೊಂದು
> ಕನ್ನಡ ದಿನಪತ್ರಿಕೆ ಇರಲಿ
>
> । ಡಿ.ವಿ.ಜಿ.

**ಒಳ ಪುಟಗಳಲ್ಲಿ**


**ಅಂತರಜಾಲ ಜ್ಞಾನದ ಆಲಯವಾಗಲಿ**
– ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಪುಟ 2 ರಲ್ಲಿ ಓದಿ

**ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಲಿ**
– ಸಿಎಂ ಸಿದ್ದರಾಮಯ್ಯ ಪುಟ 2 ರಲ್ಲಿ

**ತನು ಮನ ಧನ - ಗುರು ಲಿಂಗ ಜಂಗಮಕೆ**
– ಲಕುಮಿಸುತ ಸಾರವಾಡ
ಪುಟ 3 ರಲ್ಲಿ

**ಕಳೆದುಹೋದ ರೈತನ ಕಣಗಳು**
– ಪ್ರದೀಪ ಎಂ ಬಿ
ಪುಟ 3 ರಲ್ಲಿ


---

# ಯುಜಿ, ನೀಟ್ ಹಾಗೂ ನಾಟಾ ಪರೀಕ್ಷೆಗಳಿಗೆ ಒಂದೇ ಅರ್ಜಿ

## ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ.ಪಾಲಾಕ್ಷ ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತುತ ವರ್ಷದಲ್ಲಿ ಸಿಇಟಿ–2024 ರ ಯುಜಿ, ನೀಟ್ ಹಾಗೂ ನಾಟಾ ಪರೀಕ್ಷೆಗಳಿಗೆ ಆನ್‌ಲೈನ್ ಮೂಲಕ ಒಂದೇ ಅರ್ಜಿಯನ್ನು ಸಲ್ಲಿಸಬೇಕು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಟಿ.ಪಾಲಾಕ್ಷ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ನಗರದ ಡಾ.ರಾಜ್ ಕುಮಾರ್ ರಸ್ತೆಯ ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ವಿಧ್ಯಾರ್ಥಿಮಿತ್ರ–2024 ಹಾಗೂ ಸಿಇಟಿ/ನೀಟ್ ವಿಶೇಷ ತರಗತಿಗಳ ಪ್ರಾರಂಭ ಸಮಾರಂಭದ ಉದ್ಘಾಟಣೆಯನ್ನು ನೆರವೇರಿಸಿ ಅವರು ಮಾತನಾಡಿದರು.

ನಗರದ ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನಲ್ಲಿ ಎಲ್ಲಾ ವಿಜ್ಞಾನ ವಿಭಾಗದ ದ್ವಿತೀಯ ವರ್ಷದ ವಿಧ್ಯಾರ್ಥಿಗಳಿಗೆ ಸಿಇಟಿ ಮತ್ತು ನೀಟ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿಶೇಷ ತರಗತಿ ಆಯೋಜಿಸಲಾಗುತ್ತಿದೆ. ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿ ತರಬೇತಿ ನೀಡಲಾಗುತ್ತದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ಮಾಡಿದರು.

ಇದೇ ಸಂದರ್ಭದಲ್ಲಿ ಸುಮಾರು 80 ಸೆಟ್ ಸಿಇಟಿ ಮತ್ತು ನೀಟ್ ಪರೀಕ್ಷೆಗಳಿಗೆ ಸಂಬಂದಿಸಿದ ಪುಸ್ತಕಗಳನ್ನು ವಿದ್ಯಾರ್ಥಿ ಗಳಿಗೆ ಉಚಿತವಾಗಿ ನೀಡಲಾ ಗುವುದು ಎಂದರು.

> **ಸಿಇಟಿ ಮತ್ತು ನೀಟ್ ಪರೀಕ್ಷೆಗಳಿಗೆ ಸಂಬಂದಿಸಿದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಉಚಿತ**

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪಿ.ಡಿ.ಹಳ್ಳಿಯ ಪ್ರಾಚಾರ್ಯರಾದ ಮಾಧವಜೋಷಿ ಅವರು ಮಾತನಾಡಿ, ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮಾಡುವುದರಿಂದ ಪಿಯುಸಿ ಹಾಗೂ ಸಿಇಟಿ, ನೀಟ್ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ಪಡೆದು ಕಾಲೇಜಿಗೆ ಹಾಗೂ ತಂದೆ ತಾಯಿಗಳಿಗೆ ಕೀರ್ತಿ ತರಬೇಕೆಂದು ಆಶಿಸಿದರು.

ಸರ್ಕಾರಿ (ಮಾ.ಪು) ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ನಾಗೇಶ್ವರ ರಾವ್.ಪಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಕಲ್ಲಪ್ಪ, ಅಕ್ಕಿ ಮಲ್ಲಿಕಾರ್ಜುನ, ನಾಗರಾಜಪ್ಪ.ಜೆ., ಸುನಿತಾಂಜಲಿ, ಪದ್ಮಜ, ದಮಯಂತಿ, ಚಂದ್ರಹಾಸ್, ಕೆ.ಮಲ್ಲಿಕಾರ್ಜನ ನಂಬೂರಿ, ಶ್ರವಂತಿ, ಕೊಟ್ರ ಬಸಮ್ಮ ಸೇರಿದಂತೆ ಬೋಧಕ–ಬೋಧಕೇತರ ಸಿಬ್ಬಂದಿಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

---

# ಹಂಪಿ ಉತ್ಸವಕ್ಕೆ ದಿನಗಣನೆ ಆರಂಭಗೊಂಡ ಸ್ವಚ್ಛತಾ ಕಾರ್ಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ನಗರಾಭಿವೃದ್ಧಿ ಕೋಶ, ಹೊಸಪೇಟೆ ನಗರಸಭೆ, ಕಮಲಾಪುರ ಪುರಸಭೆ ಹಾಗೂ ಹಂಪಿ ಗ್ರಾಮ ಪಂಚಾಯತ್ ಸಹಯೋಗದಲ್ಲಿ ಶುಕ್ರವಾರ ಸ್ವಚ್ಛತಾ ಕಾರ್ಯ ಆರಂಭಗೊಂಡಿತು.

2023–24ನೇ ಸಾಲಿನ ಹಂಪಿ ಉತ್ಸವವು ಫೆಬ್ರವರಿ 02, 03 ಮತ್ತು 04ರಂದು ಮೂರು ದಿನಗಳ ಕಾಲ ನಡೆಯಲಿದ್ದು, ಉತ್ಸವದ ತಯಾರಿಯ ಭಾಗವಾಗಿ ಸ್ವಚ್ಛತಾ ಮತ್ತು ನೈರ್ಮಲ್ಯ ಸಮಿತಿಯು ಹಂಪಿಯ ಗಾಯಿತ್ರಿ ಪೀಠ, ಮುಖ್ಯ ವೇದಿಕೆ ಸೇರಿದಂತೆ ಹಂಪಿಯ ಪ್ರಮುಖ ಸ್ಥಳಗಳ ಸ್ವಚ್ಛತೆಗೆ ಮುಂದಾಗಿದೆ. ನಗರಸಭೆ, ಪುರಸಭೆ, ಗ್ರಾ.ಪಂ ಕಸವಿಲೇವಾರಿ ವಾಹನಗಳು, ಜೆಸಿಬಿ ವಾಹನ ಹಾಗೂ ಪೌರಕಾರ್ಮಿಕರು ಈ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ.



---

# ಆರ್ಥಿಕ ಸ್ವಾವಲಂಬನೆಯತ್ತ ಯುವಕರು ಚಿತ್ತಹರಿಸಿ

## ವರುಣ್ ಕೌಟಿ ಹೇಳಿಕೆ | ಶ್ರೀಮತಿ ಬಸಮ್ಮ ಕೊಟ್ರಪ್ಪನವರ ಸ್ಮರಣಾರ್ಥ ದತ್ತಿ ಉಪನ್ಯಾಸ ಮತ್ತು ಪ್ರತಿಭಾ ಪುರಸ್ಕಾರ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ಕಠಿಣ ತಪಸ್ಸಿನ ಮೂಲಕ ಸ್ವಾಮಿ ವಿವೇಕಾನಂದರು ಜ್ಞಾನ ಸಂಪಾದಿಸಿಕೊಂಡರು. ಸ್ವಾಮಿ ವಿವೇಕಾನಂದರಂತೆ ಇನ್ನೊಬ್ಬ ದಾರ್ಶನಿಕ ಹುಟ್ಟಲಿಲ್ಲ ಎಂದು ವರುಣ್ ಕೌಟಿ ಅಭಿಪ್ರಾಯಪಟ್ಟರು.

ಪಟ್ಟಣದ ಎಸ್.ಯು.ಜೆ.ಎಂ.ಪದವಿ ಪೂರ್ವ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ಶ್ರೀಮತಿ ಬಸಮ್ಮ ಕೊಟ್ರಪ್ಪನವರ ಸ್ಮರಣಾರ್ಥ ದತ್ತಿ ಉಪನ್ಯಾಸ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ, ಭಾರತ ಜಗತ್ತಿಗೆ ಜ್ಞಾನವನ್ನು ನೀಡಿದೆ. ಭಾರತ ಇಂದು ವಿಶ್ವಗುರುವಾಗಿದೆ. ಭಾರತ ಜಗತ್ತಿನ 4ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿದೆ. ಸ್ವಾಮಿ ವಿವೇಕಾನಂದರು ಯುವಕರಿಗೆ ರಾಷ್ಟ್ರೀಯ ಜಾಗ್ರತೆ ನೀಡಿದರು. ಜಗತ್ತಿಗೆ ಬೇಕಾಗಿರುವುದು ಜ್ಞಾನ. ಇಂದು ನಾವು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕು. ಭಾರತ ಎಂದರೆ ಭಾವ, ರಾಗ, ತಾಳ ಎಂದರು.

ಕನ್ನಡ ಉಪನ್ಯಾಸಕ ಎಸ್.ಚನ್ನಬಸಪ್ಪ ಸ್ವಾಮಿ ಮಾತನಾಡಿ, ಪ್ರಾಚಾರ್ಯರಾದ ಹೆಚ್. ಮಲ್ಲಿಕಾರ್ಜುನ ತಮ್ಮ ತಂದೆ ತಾಯಿಯ ಸ್ಮರಣಾರ್ಥ ದತ್ತಿ ನಿಧಿಯನ್ನು ಸ್ಥಾಪಿಸಿ ಪ್ರತಿವರ್ಷ ದತ್ತಿ ನಿಧಿ ಹಣದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಮಾಡುತ್ತಿರುವುದು ಶ್ಲಾಘನೀಯ. ಸ್ವಾಮಿ ವಿವೇಕಾನಂದರು ಆಧ್ಯಾತ್ಮದ ಧೃವತಾರೆ, ಭಾರತೀಯ ಜನಪ್ರಿಯ ವೀರಹಿಂದೂ ಸನ್ಯಾಸಿ, ತತ್ವಜ್ಞಾನಿ, ಧಾರ್ಮಿಕ ಶಿಕ್ಷಕ, ಜಗತ್ತಿಗೆ ವೇದಾಂತ ಮತ್ತು ಯೋಗವನ್ನು ಪರಿಚಯಿಸಿದವರಲ್ಲಿ ಪ್ರಮುಖರಾಗಿದ್ದಾರೆ ಎಂದರು.



ಪ್ರಾಚಾರ್ಯರಾದ ಹೆಚ್.ಮಲ್ಲಿಕಾರ್ಜುನ ಅಧ್ಯಕ್ಷತೆವಹಿಸಿ ಮಾತನಾಡಿ, ಜಗತ್ತಿನಲ್ಲಿಯೇ ಭಾರತ ಇಂದು ಬಲಿಷ್ಠವಾಗಿದೆ. ಯುವಜನಾಂಗ ರಾಷ್ಟ್ರೀಯ ಜವಾಬ್ದಾರಿಯನ್ನು ಹೊರಬೇಕು, ರಾಷ್ಟ್ರಸೇವೆ, ಸಮಾಜಸೇವೆ ಮಾಡುತ್ತಾ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ಮೈಗೂಡಿಕೊಂಡು ಅವರಂತೆಯೇ ವಿಶ್ವಮಟ್ಟದಲ್ಲಿ ಬೆಳಕು ಚೆಲ್ಲಬೇಕು ಎಂದರು.

ರಾಮಾಯಣ – ಮಹಾಭಾರತ ಪರೀಕ್ಷೆಯಲ್ಲಿ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಕನ್ನಡ ವಿಷಯದಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ "ಕನ್ನಡ ರತ್ನ" ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಬಿ.ಕೃಷ್ಣಮೂರ್ತಿ, ಎಸ್. ಕೊಟ್ರಪ್ಪ, ಟಿ.ಎಂ.ಜಯದೀಪ, ಕೆ.ಬೀರಾನಾಯ್ಕ, ಸಿ.ಎಂ.ಪ್ರವೀಣ, ಆತ್ಮಾನಂದ ಎಂ. ಕೆ.ಎಂ.ಶೈಲಜ, ಈ.ಮಾರುತಿ, ಕೆ.ಅಶೋಕಪ್ಪ, ಜಗದೀಶ್ ಪಿ. ಶಾಂತವೀರೇಶ್ ಜಿ. ಪ್ರಕಾಶ್ ಟಿ. ಶಿವಕುಮಾರ ಜಿ. ಉಪಸ್ಥಿತರಿದ್ದರು.

---

# ಆದರ್ಶಗಳನ್ನು ಮೈಗೂಡಿಸಿಕೊಳ್ಳಿ

## ಗ್ರಂಥಾಲಯ ಶಾಖಾಧಿಕಾರಿ ಮಲ್ಲಪ್ಪ ಗುಡ್ಲಾನೂರ್ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಯುವಕರು ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಸಮಾಜಕ್ಕೆ ಸಕರಾತ್ಮಕವಾದ ಕೊಡುಗೆಗಳನ್ನು ನೀಡಬೇಕು ಹಾಗೆ ಯುವಕರು ಸದಾ ಚಟುವಟಿಕೆಯಿಂದ ಇದ್ದು ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕೊಟ್ಟೂರು ಸಾರ್ವಜನಿಕ ಗ್ರಂಥಾಲಯ ಶಾಖಾಧಿಕಾರಿ ಮಲ್ಲಪ್ಪ ಗುಡ್ಲಾನೂರ್ ಹೇಳಿದರು.

ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಶುಕ್ರವಾರ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ನಿಮಿತ್ತ ಏರ್ಪಡಿಸಿದ್ದ 162ನೇ ಯುವಜನೋತ್ಸವ ದಿನಾಚರಣೆಯ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಎಸ್ ಕೆ ಗಿರೀಶ್ ಮಾತನಾಡಿ ಯುವಕರು ಆಧ್ಯಾತ್ಮದ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಸವಿಸ್ತಾರವಾಗಿ ತಿಳಿಸಿದರು. ಎ ನಾಗಪ್ಪ, ಈಶಪ್ಪ ವೀರಭದ್ರಪ್ಪ ,ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು ಮಹಿಳೆಯರು, ಓದುಗರು ಸೇರಿದಂತೆ ಸಾರ್ವಜನಿಕರು ಇದ್ದರು.

## ವಚನ ಅರಿವು

### ಮನ ಬತ್ತಲಾಗಬೇಕು

**ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?**
**ವ್ರತವಿದ್ದಡೇನು, ವ್ರತಹೀನರಾದ ಬಳಿಕ?**
**ನೆರೆದಡೆ ನರಕವಯ್ಯ ನಿಂಬೇಶ್ವರಾ.**

**– ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ**

ದೇಹ ಬಟ್ಟೆ ತೊಡುವುದನ್ನು ಬಿಟ್ಟು ವೈರಾಗ್ಯ ಬಂದಿದೆಯೆಂದುಕೊಂಡರೆ, ದೇಹವನ್ನು ಕೆಡದಂತೆ ಎಚ್ಚರಿಕೆ ವಹಿಸಿಕೊಂಡು ಶುದ್ಧವಾಗಿಟ್ಟುಕೊಂಡರೆ ಸಾಕಾಗುವುದಿಲ್ಲ. ಮನಸ್ಸು ಶುದ್ಧವಾಗಿರಬೇಕು. ಮನಸ್ಸು ಏನನ್ನು ಆಲೋಚಿಸುತ್ತದೆಯೋ ದೇಹ ಅದನ್ನು ಮಾಡುತ್ತದೆ. ಎಲ್ಲದಕ್ಕೂ ಮನಸ್ಸೇ ಮೂಲ. ಹಾಗಾಗಿ ಮನಸ್ಸಿನಲ್ಲಿರುವ ಆಸೆ, ಆಮಿಷ, ಕೆಟ್ಟ ಬಯಕೆ, ಅನೈತಿಕ ಮಾರ್ಗವನ್ನು ಬಿಟ್ಟು ಸತ್ಯದ, ಭಕ್ತಿಯ, ನೈತಿಕ ಪ್ರಾಮಾಣಿಕ ಮಾರ್ಗವನ್ನು ಅನುಸರಿಸಬೇಕು. ಕೇವಲ ಆಚರಣೆಗೆ, ತೋರಿಕೆಗೆ ಬದುಕುವುದು ಶರಣ ವ್ರತವಲ್ಲ. ವ್ರತಕ್ಕೆ ತಪ್ಪಿ ನಡೆದರೆ ಅದು ನರಕವೆ ಸರಿ. ಅರಿವನ್ನು ಪಡೆದು ಹುಸಿತನವನ್ನು ಬಿಟ್ಟು ಬದುಕಿದರೆ ಅದೇ ನಿಜವಾದ ಸುಖ. ಸ್ವರ್ಗಕ್ಕೆ ಸಮ ಎನ್ನುತ್ತಾಳೆ ಶರಣೆ ಗುಡ್ಡವ್ವೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಅಲ್ಲಮಪ್ರಭುದೇವರ ಹೆಸರನ್ನು ಮೈದಾನಕ್ಕೆ ಸಿಎಂ ಸಿದ್ಧರಾಮಯ್ಯ ಘೋಷಿಸಿರುವುದು ಸ್ವಾಗತ : ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು

**ಹಂಪಿ ಟೈಮ್ಸ್ ಶಿವಮೊಗ್ಗ**

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಬೆಳ್ಳಿಗಾವಿಯಲ್ಲಿ ಜನಿಸಿದ ಮಹಾಶರಣ ಅಲ್ಲಮಪ್ರಭುದೇವರ ಹೆಸರನ್ನು ಶಿವಮೊಗ್ಗ ನಗರದ ಹಳೇ ಕಾರಾಗೃಹದ ಮೈದಾನಕ್ಕೆ ಇಡುವುದು ಸೂಕ್ತ ಎಂದು ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ್ದು ನಮಗೆ ಅಪಾರ ಸಂತೋಷ ಉಂಟುಮಾಡಿದೆ ಎಂದು ಚಿಕ್ಕಮಗಳೂರು ಬಸವಕೇಂದರ, ಶಿವಮೊಗ್ಗದ ಶ್ರೀ ಬಸವತತ್ತ್ವ ಪೀಠದ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು ತಿಳಿಸಿದ್ದಾರೆ.

2019ರ ಜನವರಿಯಲ್ಲಿ ಶಿವರಾತ್ರೀಶ್ವರರ 1059ನೆಯ ಜಯಂತಿ ಮಹೋತ್ಸವವನ್ನು ಆಚರಿಸುವಾಗ ಈ ಜಾಗಕ್ಕೆ ಅಲ್ಲಮಪ್ರಭು ಬಯಲು ಎಂದೇ ನಾಮಕರಣ ಮಾಡಿದ್ದು, ಅದನ್ನು ಹಾಗೆಯೇ ಕರೆಯಬೇಕೆಂದು ಶರಣ ಬಿ. ಎಸ್. ಯಡಿಯೂರಪ್ಪನವರ ಅಧ್ಯಕ್ಷತೆಯ ಬಹಿರಂಗ ಸಮಾರಂಭದಲ್ಲಿ ಸುತ್ತೂರು ಜಗದ್ಗುರುಗಳವರು ಸೂಚಿಸಿದ್ದರು. ಅಂದು ಎಲ್ಲ ಜನಸಮುದಾಯದ ಒಪ್ಪಿಯಿಂದ ಘೋಷಿಸಿದ್ದ ಹೆಸರನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಇಂದು ಅಧಿಕೃತವಾಗಿ ಘೋಷಿಸಿರುವುದು, 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಜಗತ್ತಿನ ಪ್ರಜಾಪ್ರಭುತ್ವದ ತಂದೆಯೆಂದೇ ಖ್ಯಾತಿವೆತ್ತ ಅನುಭವ ಮಂಟಪಕ್ಕೆ ಸಂದ ಗೌರವವೆಂದು ಭಾವಿಸಿಕೊಂಡಿದ್ದೇವೆ.

ಕನ್ನಡದ ಪ್ರಥಮ ಅನುಭಾವಿ ಕವಿ, ಬಯಲು ತತ್ತ್ವದ ಪ್ರತಿಪಾದನೆ ಮಾಡಿದ ದಾರ್ಶನಿಕ, ಶೂನ್ಯಪೀಠದ ಪ್ರಥಮ ಅಧ್ಯಕ್ಷ, ಪ್ರಜಾಪ್ರಭುತ್ವದ ಮೊದಲ ಮಾದರಿ ಅನುಭವ ಮಂಟಪದ ಪ್ರಥಮ ಅಧ್ಯಕ್ಷ, ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಬೆಳ್ಳಿಗಾವಿಯಲ್ಲಿ ಜನಿಸಿದ ಮಹಾಶರಣ ಅಲ್ಲಮಪ್ರಭುದೇವರ ಹೆಸರನ್ನು ಶಿವಮೊಗ್ಗ ನಗರದ ಹಳೇ ಕಾರಾಗೃಹದ ಮೈದಾನಕ್ಕೆ ಇಡುವುದು ಸೂಕ್ತ ಎಂದು ಘೋಷಿಸಿದ ನಾಡಿನ ಮುಖ್ಯಮಂತ್ರಿಗಳಾದ ಶರಣ ಸಿದ್ಧರಾಮಯ್ಯನವರಿಗೆ ಹಾಗು ಈ ವಿಷಯದ ಕುರಿತಾಗಿ ದನಿ ಎತ್ತಿ ಮುಖ್ಯಮಂತ್ರಿಗಳ ಗಮನಸೆಳೆದ ಸಚಿವರಾದ ಶರಣ ಮಧು ಬಂಗಾರಪ್ಪ ಅವರಿಗೆ ಜಿಲ್ಲೆಯ ಎಲ್ಲಾ ಮಠಾಧೀಶರ ಪರವಾಗಿ ಹಾಗು ಸಮಾಜ ಬಾಂಧವರ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಚೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್: hampitimes@gmail.com
M: 9448633038

# ಅಂತರಜಾಲ ಜ್ಞಾನದ ಆಲಯವಾಗಲಿ

ಸಂಪರ್ಕ ಮಾಧ್ಯಮಗಳ ಕ್ಷೇತ್ರದಲ್ಲಿ ಹಿಂದೆಂದೂ ಕಂಡರಿಯದಷ್ಟು ಮಟ್ಟದಲ್ಲಿ ಆವಿಷ್ಕಾರಗಳು ಆಗುತ್ತಿವೆ. ನಿನ್ನೆ ದಿನದ ನೂತನ ವಿಧಾನ ಇಂದಿಗೆ ಹಳತಾಗಿ ಮತ್ತೊಂದು ವಿಭಿನ್ನವಾದ ಆವಿಷ್ಕಾರಗಳು ಬರುತ್ತಿವೆ. ಸಂಪರ್ಕ ಮಾಧ್ಯಮ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಗಣಕಯಂತ್ರದ್ದೆ ಸಿಂಹಪಾಲು. ನಮ್ಮ ಮಕ್ಕಳು ಇಂದಿನ ದಿನಮಾನಗಳಲ್ಲಿ ಕಂಪ್ಯೂಟರ್ ಕಲಿಕೆಯನ್ನು ಮಾಡಲೇಬೇಕಿದೆ. ಅದರ ಕುರಿತು ಜ್ಞಾನ ಇಲ್ಲದೇ ಹೋದಲ್ಲಿ ಅವರು ಸಾಕ್ಷರರ ಪಟ್ಟಿಗೆ ಸೇರಲಾರರು ಎಂಬಷ್ಟು ಅದರ ಪ್ರಭಾವವಿದೆ.

ಕಂಪ್ಯೂಟರ್ ಮುಖಾಂತರ 1970ರ ನಂತರ ಸಂಪರ್ಕ ಕ್ಷೇತ್ರದಲಿ ಬಹುದೊಡ್ಡ ಕ್ರಾಂತಿಯನ್ನು ಹುಟ್ಟುಹಾಕಿರುವುದು ಅಂತರಜಾಲ. ನಮ್ಮ ಇಂದಿನ ದೈನಂದಿನ ಜೀವನದಲ್ಲಿ ಇಂಟರ್‌ನೆಟ್ ಬಹಳ ಮಹತ್ವದ ಪಾತ್ರ ವಹಿಸುತ್ತಿದೆ. ನಮ್ಮಗಳ ನಡುವೆ ಪರಸ್ಪರ ಸಂಪರ್ಕ ಮಾಡಿಕೊಳ್ಳಲು ಅನೇಕ ಸಂಪರ್ಕ ಮಾಧ್ಯಮಗಳನ್ನು ಕಂಡುಕೊಂಡಿದ್ದೇವೆ. ಒಬ್ಬ ವ್ಯಕ್ತಿ ಇನೊಬ್ಬ ವ್ಯಕ್ತಿಯನ್ನು ಸಂಪರ್ಕಿಸಲು ನಾವು ಇಷ್ಟು ದಿನ ಪತ್ರ, ತಂತಿ, ದೂರವಾಣಿ ಮುಂತಾದ ಮಾಧ್ಯಮಗಳನ್ನು ಬಳಸುತ್ತಿದ್ದೆವು. ಇವುಗಳಿಗಿಂತ ಸಾವಿರಾರು ಪಟ್ಟು ವೇಗದ ಮತ್ತು ತಕ್ಷಣವೇ ಸಂಪರ್ಕ ಸಾಧಿಸುವಂತಾಗಲು ಈಗ ಕಂಪ್ಯೂಟರ್ ಉಪಯೋಗಿಸುತ್ತಿದ್ದೇವೆ. ತಂತಿಗಳ ಮತ್ತು ಉಪಗ್ರಹಗಳ ಜೋಡಣೆಯಿಂದ ಎಲೆಕ್ಟ್ರಾನಿಕ್ ತರಂಗಗಳ ಮೂಲಕ ಗಣಕಯಂತ್ರಗಳ ನಡುವೆ ಮಾಹಿತಿಯನ್ನು ರವಾನಿಸಬಹುದು.

ಈ ವಿಧಾನದಲ್ಲಿ ಪರಸ್ಪರ ಸಂಪರ್ಕ ಕಲ್ಪಿಸಿಕೊಳ್ಳುವ ಕಂಪ್ಯೂಟರ್‌ಗಳ ಸಮೂಹವನ್ನು ಗಣಕಯಂತ್ರಗಳ ಜಾಲ ಎನ್ನುತ್ತಾರೆ. ಇಂಥ ಕಂಪ್ಯೂಟರ್ ಜಾಲಗಳು ಸೇರಿ ರಚನೆಯಾಗುವ ಬೃಹತ್ ಜಾಲವೇ ಇಂಟರ್‌ನೆಟ್ ಅಥವಾ ಅಂತರಜಾಲ ಎನ್ನುತ್ತೇವೆ. ಇಂಟರ್‌ನೆಟ್, ಜಾಲಗಳ ಜಾಲವಾಗಿದ್ದು ಅದರಲ್ಲಿ ಲಕ್ಷಾಂತರ ಗಣಕಯಂತ್ರಗಳನ್ನು ಒಂದಕ್ಕೊಂದು ಜೋಡಿಸಲಾಗಿರುತ್ತದೆ.


ಅಂತರಜಾಲದಿಂದ ನಮಗಾಗುವ ಅನುಕೂಲಗಳು ಒಂದಲ್ಲ ಎರಡಲ್ಲ. ಜಗತ್ತಿನಾದ್ಯಂತ ಜನರಿಗೆ ಯಾವುದೇ ವಿಷಯದ ಕುರಿತ ವಿವರಣಾತ್ಮಕವಾದ ಮಾಹಿತಿಯನ್ನು ಇಂಟರ್‌ನೆಟ್‌ನಲ್ಲಿ ತಕ್ಷಣ ಪಡೆಯಬಹುದಾಗಿದೆ. ಅಂದರೆ ಕ್ರೀಡೆ, ಹಣಕಾಸು, ಸಿನೆಮಾ, ಪತ್ರಿಕೋದ್ಯಮ, ಆಹಾರ, ಸಂಗೀತ, ಕಾನೂನು, ಶಿಕ್ಷಣ, ಸಾಹಿತ್ಯ, ವಿಜ್ಞಾನ, ಕಂಪ್ಯೂಟರ್, ಔಷಧಿ ಮುಂತಾದ ರಂಗಗಳಲ್ಲಿನ ತಕ್ಷಣದವರೆಗೂ ಆಗಿರುವ ಎಲ್ಲ ಬದಲಾವಣೆಯ ಮಾಹಿತಿಯನ್ನು ಅಂತರಜಾಲ ತನ್ನೊಡಲಲ್ಲಿ ಇಟ್ಟುಕೊಂಡಿರುತ್ತದೆ. ಜಗತ್ತಿನ ಯಾವುದೇ ಭಾಗದಲ್ಲಿರುವವರೊಂದಿಗೆ ತಕ್ಷಣ ಸಂಪರ್ಕ ಸಾಧಿಸಿ, ಮಾತನಾಡುವ ಅವಕಾಶವನ್ನೂ ಅದು ಒದಗಿಸುತ್ತದೆ.ವಿದ್ಯುನ್ಮಾನಅಂಚೆ(ಇ–ಮೇಯಿಲ್)ಉಪಯೋಗಿಸಿಕೊಂಡು ಸಂದೇಶ, ಪತ್ರಗಳನ್ನು ಅತಿವೇಗದಲ್ಲಿ ಸಂಬಂಧಿಸಿದವರಿಗೆ ತಲುಪಿಸಬಹುದು. ಇತ್ತೀಚೆಗೆ ಪ್ರಸಿದ್ಧ ಕಂಪನಿಗಳು ತಮ್ಮ ಉತ್ಪನ್ನಗಳ ವ್ಯಾಪಾರ ವಹಿವಾಟಿಗೆ ಅಂತರ್ಜಾಲವನ್ನು ಬಳಸಿಕೊಳ್ಳುತ್ತಿವೆ.

ಎಸ್.ಎಸ್.ಎಲ್.ಸಿ ಇಂದ ಉನ್ನತ ಶಿಕ್ಷಣದವರೆಗೂ ಯಾವುದೇ ಕೋರ್ಸಿನ ವಿವರಗಳು, ಪ್ರಶ್ನೆಪತ್ರಿಕೆಯ ಮಾದರಿಗಳು ಮತ್ತು ಫಲಿತಾಂಶಗಳು ಇಂದು ಅತರಜಾಲದಲ್ಲಿ ಲಭ್ಯವಿವೆ. ವಿಧ್ಯಾರ್ಥಿಗಳ ಪಾಲಿಗೆ ಕಾಮಧೇನುವಾಗಿದುವುದರಿಂದ ಅವರು ಇದರ ಅಮೃತವನ್ನು ಸವಿಯಬೇಕು. ಇಂದಿನ ಇ– ಆಡಳಿತ ದಿನಗಳಲ್ಲಿ ಇದು ಅತಿಮುಖ್ಯವಾಗಿದೆ. ಹಳ್ಳಿಯ ರೈತನಿಗೆ ಬೇಕಾದ ಬೆಳೆಯ ವಿವರ, ಮಾರುಕಟ್ಟೆ ಮಾಹಿತಿ, ವಿದ್ಯಾರ್ಥಿಗಳಿಗೆ ಜೊತೆಗೆ ಶಿಕ್ಷಕರಿಗೆ ಶೈಕ್ಷಣಿಕ ವಿವರಗಳು, ಸಂಶೋಧನೆಯ ಹಂತದವರೆಗೂ ಜ್ಞಾನದ ಸಾಗರ ಅದರಲ್ಲಿ ದೊರೆಯುತ್ತದೆ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವ ಜಾಣ್ಮೆ ನಮ್ಮಲ್ಲಿರಬೇಕು.

ಇಂಟರ್‌ನೆಟ್‌ನಲ್ಲಿ ಈಜಾಡುವ ಕಲೆ ಒಮ್ಮೆ ಸಿದ್ಧಿಸಿದರೆ ಸಾಕು ನಂತರ ಅದೇ ಬೇರೆ ಬೇರೆ ಕಡೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಪ್ರಪಂಚದ ಯಾವುದೇ ಮೂಲೆಯ ಹಳ್ಳಿಯಲ್ಲಿದ್ದರೂ ತಕ್ಷಣ ವಿಶ್ವದ ಯಾವುದೋ ತಾಣವನ್ನು ತಲುಪಿ ಬೇಕಾದದನ್ನು ಪಡೆಯಬಹುದು. ಯಾವುದೇ ದಿನಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆಗಳನ್ನು ಓದಬಹುದು ಮತ್ತು ಅವುಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ರವಾನಿಸಬಹುದು. ಇತ್ತೀಚೆಗೆ ನಮ್ಮ ದೇಶದಲ್ಲೂ ವಿದ್ಯುನ್ಮಾನ ಪುಸ್ತಕಗಳು ಮತ್ತು ಮಾಹಿತಿ ಕೋಶಗಳ ಬಳಕೆ ಹೆಚ್ಚಾಗುತ್ತಿದೆ. ವಿದೇಶಗಳಲ್ಲಿ ಏನೆಲ್ಲಾ ಕಲಿಯಲು ಸಾಧ್ಯವೋ, ಅದನ್ನೆಲ್ಲಾ ನಮ್ಮ ಹಳ್ಳಿಗಳಲ್ಲೇ ಕಲಿಯಲು ಅಂತರಜಾಲ ನೆರವಾಗಿದೆ.

**ಅಂತರಜಾಲದಲ್ಲಿ ಹುಡುಕಾಟ !**

ವೆಬ್ ಬ್ರೌಸಿಂಗ್ ಮಾಡುವ ಸಮಯದಲ್ಲಿ ಸ್ವಲ್ಪಮಟ್ಟಿನ ಇಂಗ್ಲೀಷ್ ಜ್ಞಾನ ಅಗತ್ಯ. ಸರಿಯಾದ ಇಂಗ್ಲೀಷ್ ಪದವನ್ನು ಗೊತ್ತುಮಾಡಿಕೊಂಡಿರಬೇಕು. ಬ್ರೌಸರ್ ಪರದೆಯ ಮೇಲೆ ಮೂಡಿದಾಗ ಅದರಲ್ಲಿ ಸರ್ಚ್‌ವಿಂಡೊನಲ್ಲಿ ಬೇಕಾದ ಮಾಹಿತಿಯ ಹೆಸರನ್ನು ಟೈಪ್‌ಮಾಡಬೇಕು. ಹುಡುಕುವ ಯಂತ್ರಕ್ಕೆ ಕೆಲಸ ಕೊಟ್ಟ ತಕ್ಷಣ, ಕೆಲವೇ ಸೆಕೆಂಡುಗಳಲ್ಲಿ ಲಕ್ಷಾಂತರ ತಾಣಗಳು ಮೂಡುತ್ತವೆ. ಯಾವುದನ್ನು ಆಯ್ಕೆ ಮಾಡಬೇಕು ಎಂಬ ಸಂದೇಹ ಮೂಡುತ್ತದೆ. ಮೊದಲ ಫ್ರೇಮ್‌ನಲ್ಲಿ ಬರುವವು ಟಾಪ್–10 ತಾಣಗಳಿರುತ್ತವೆ. ಪ್ರತಿ ತಾಣದ ಬಗ್ಗೆ ಒಂದೆರೆಡು ಸಾಲು ಮುಖ್ಯಾಂಶಗಳಿರುತ್ತವೆ. ಯಾವುದು ಬೇಕಾಗುತ್ತದೋ ಅದಕ್ಕೆ ಕ್ಲಿಕ್ ಮಾಡಿದರೆ ಆ ತಾಣ ನಮ್ಮೆದುರು ಪ್ರತ್ಯಕ್ಷವಾಗುತ್ತದೆ. ಅದರಲ್ಲಿ ನಿಮಗೆ ಬೇಕಾದ ಮಾಹಿತಿ ಹೆಕ್ಕಿ ತೆಗೆಯುವುದು ನಮ್ಮ ಕೆಲಸ. ಈ ರೀತಿ






**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com

ಬೇಕಾದ ಮಾಹಿತಿಗಳ ತಾಣಗಳು ಸದಾ ಸಿದ್ಧವಾಗಿರುತ್ತವೆ. ಕೆಲವು ಉಚಿತವಾಗಿ ಮಾಹಿತಿ ನೀಡಿದರೆ, ಇನ್ನು ಕೆಲವು ನಿಗಧಿತ ಶುಲ್ಕ ಪಡೆದು ಮಾಹಿತಿ ಒದಗಿಸುತ್ತವೆ. ಹಾಗಾದರೆ ಕೆಲವು ಪ್ರಮುಖ ತಾಣಗಳನ್ನು ಸುತ್ತಾಡಿ ಬರೋಣ.

* ಇಂದಿನ ದಿನದ ಸ್ಪರ್ಧಾಲೋಕವನ್ನು ಗಮನಿಸಿದರೆ ನಮಗೆ ಎಷ್ಟು ಜ್ಞಾನ ವಿದ್ದರೂ ಕಡಿಮೆ ಎಂದು ತೋರುತ್ತದೆ. ಪ್ರತಿ ವರ್ಷದ ಆರಂಭದಲ್ಲಿ ಹಿಂದಿನ ವರ್ಷದ ಮಹತ್ವದ ದಾಖಲೆಗಳ ಸಂಗ್ರಹದ 'ವರ್ಷಪುಸ್ತಕ'ಗಳು ಪರಿಕ್ಷಾರ್ಥಿಗಳಿಗೆ ನೆರವಾಗುತ್ತವೆ. ಹೊಸದಾಗಿ ಬರುವ ಈ ಪುಸ್ತಕಗಳು ವಿನೂತನ ಮಾಹಿತಿಯನ್ನು ಒಳಗೊಂಡಿರುತ್ತವೆ. ಅಂತರಜಾಲದಲ್ಲೂ ಅವುಗಳನ್ನು ಪಡೆಯಬಹುದು. www.google.com ಸರ್ಚ್ ಇಂಜಿನ್ನಿನಲ್ಲಿ year book ಎಂದು ಬರೆದು ಹುಡುಕಿ ನೋಡಿ ವಿಸ್ಮಯ ಲೋಕವೇ ನಿಮ್ಮ ಕಣ್ಣ ಮುಂದಿರುತ್ತದೆ.

* ನಮ್ಮ ದೇಶ– ನಮ್ಮ ಜನ– ನಮ್ಮ ನುಡಿ– ನಮ್ಮ ಸಂಸ್ಕೃತಿಗಳ ಕುರಿತು ಎಲ್ಲರೂ ತಿಳಿದುಕೊಳ್ಳಬೇಕು. ತರಗತಿಯಲ್ಲಿ ಕಲಿಯಲು, ಸಂದರ್ಶನದಲ್ಲಿ ಯಶಸ್ವಿಯಾಗಲು ಮತ್ತು ನಮ್ಮ ದೇಶ ಎಂಬ ಅಭಿಮಾನದಿಂದಾದರು ಮಾಹಿತಿಗಳು ಗೊತ್ತಿರಬೇಕು. ಅದರ ಕುರಿತಾಗಿ ಸರ್ಚ್‌ಇಂಜಿನ್ನಿನಲ್ಲಿ government of India ಅಥವಾ republic of india ಎಂದು ಬರೆದು, ಹುಡುಕಿ ನೋಡಿ ದೇಶದ ಸಮಗ್ರ ಮಾಹಿತಿ ಒಂದೊಂದಾಗಿ ತೆರೆದುಕೊಳ್ಳುತ್ತವೆ. ಮೇರಾ ಭಾರತ್ ಮಹಾನ್ ಎಂದು ಅರಿಯಬಹುದು.

* ಯುಗ ಪುರುಷ ಗಾಂದೀಜಿ ಬಗ್ಗೆ, ಗಾಂಧೀ ಶಿಕ್ಷಣದ ಕುರಿತು, ಗಾಂಧೀಯಿಸಮ್ ಬಗ್ಗೆ, ಮಹಾತ್ಮರ ದೂರದೃಷ್ಟಿಯ ಪರಿಚಯ ಮಾಡಿಕೊಳ್ಳಲು ಸರ್ಚ್‌ಇಂಜಿನ್ನಿನಲ್ಲಿ mahatma gandhiji ಎಂದು ಬರೆದರೆ ಗಾಂದೀಜಿಯವರ ಕುರಿತ ನಮ್ಮ ಅರಿವಿನ ವಿಸ್ತಾರ ಹೆಚ್ಚಾಗುತ್ತದೆ.

* ಜೀವ ವಿಜ್ಞಾನದ ಹೊಸ ಅನ್ವೇಷಣೆಗಳು, ಜೈವಿಕ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ ಮುಂತಾದ ವಿಷಯಗಳನ್ನು ಅರಿಯಬೇಕಾದರೆ, ಸರ್ಚ್‌ಇಂಜಿನ್ನಿನಲ್ಲಿ biology ಎಂದು ಬರೆದು ನೋಡಿ ಅಚ್ಚರಿಗಳು ಕಾದಿರುತ್ತವೆ.

* ಅನಂತ ವಿಶ್ವದ ಅಗಾಧ ಮಾಹಿತಿ ಸಾಗರದಲ್ಲಿ ಗ್ರಹ–ತಾರೆಗಳ ವಿವರ ಹುಡುಕುತ್ತಾ ಹೋದರೆ ಅಗಣಿತ ಸಂಖ್ಯೆಯಲ್ಲಿ ತಾರಾ ಲೋಕದ ಪರಿಚಯ ಮಾಡಿಕೊಳ್ಳಲು ಸರ್ಚ್‌ಇಂಜಿನ್ನಿನಲ್ಲಿ , ky watching ಎಂದು ಬರೆದರೆ ಸಾಕು, ಆಗಸವೆಲ್ಲಾ ನಮ್ಮೆದಿರಿರುತ್ತದೆ. ಹಾಗೆಯೆ ಅದರಲ್ಲಿ ಎಂದು image ಟೈಪ್ ಮಾಡಿದರೆ ಗ್ರಹತಾರೆಗಳ ಚಿತ್ರ–ಫೋಟೋಗಳು ಸಿಗುತ್ತವೆ.

* ಇಂದು ಉದ್ಯೋಗ ಪುರುಷರಿಗಷ್ಟೆ ಅಲ್ಲದೇ ಮಹಿಳೆಯರಿಗೂ ಅಗತ್ಯವಾಗಿದೆ. ಆದರೆ ನಮಗೆ ಬೇಕಾದ ಉದ್ಯೋಗದ ಮಾಹಿತಿ–ಸಂದರ್ಶನ ವಿಧಾನ ಮುಂತಾದವುಗಳ ಬಗ್ಗೆ ಮಹಿತಿ ಬೇಕಾದಾಗ ದೊರೆಯಲಾರವು. ಕೆಲವು ಹುದ್ದೆಗಳಿಗೆ ಅಂತರ್ಜಾಲದಲ್ಲಿ ಪ್ರತಿಕ್ರಿಯಿಸಿ, ಅರ್ಜಿ ಕಳಿಸಿ, ಸಂದರ್ಶನ ಎದುರಿಸಬಹುದಾಗಿದೆ. ಸರ್ಚ್‌ಇಂಜಿನ್ನಿನಲ್ಲಿ job sites ಎಂದು ಬರೆದರೆ ಹುದ್ದೆಗಳ ಕುರಿತು ಮಾಹಿತಿ ಪಡೆಯಬಹುದು. ಹುದ್ದೆಗಳನ್ನು ಆಯ್ಕೆ ಮಾಡಿಕೊಂಡಾಗ ಸಮರ್ಥವಾಗಿ ಸಂದರ್ಶನ ಎದುರಿಸಲು Successful interviews ಎಂದು ಹುಡುಕಿದರೆ ಮಾಹಿತಿಗಳು ಲಭ್ಯವಾಗುತ್ತವೆ. ಅದರ ಮುಖಾಂತರ ಸಂದರ್ಶನವನ್ನು ಯಶಸ್ವಿಮಾಡಬಹುದು.

* ಕನ್ನಡದ ಅನೇಕ ಪತ್ರಿಕೆಗಳು ಅಂತರ್ಜಾಲದಲ್ಲಿ ಲಭ್ಯವಿವೆ. ಪತ್ರಿಕೆಗಳ ಮುಖಪುಟದಲ್ಲಿ ಅವುಗಳ ತಾಣದ ಕುರಿತು ಮಾಹಿತಿ ಇರುತ್ತದೆ. ಅದನ್ನು ಬಳಸಿ ಪತ್ರಿಕೆಗಳನ್ನು ಅಂತರ್ಜಾಲದಲ್ಲಿ ಓದಬಹುದು.

* ವಿಶ್ವದ ಅಗಾಧ ಮಾಹಿತಿ ಮಹಾಸಾಗರದಲ್ಲಿ ವಿಜ್ಞಾನದ ತಾಣಗಳನ್ನು ಹುಡುಕುತ್ತಾ ಹೋದರೆ ಅಚ್ಚರಿಯ ಸಂಗತಿಗಳು ದೊರಕುತ್ತಾ ಹೋಗುತ್ತವೆ. ವಿಜ್ಞಾನ ಕ್ಷೇತ್ರಕ್ಕೆ ಭಾರತೀಯರ ಕೊಡುಗೆ ಕುರಿತ ತಾಣಗಳು ಲಭ್ಯವಿವೆ. ಸರ್ಚ್‌ಇಂಜಿನ್ನಿನಲ್ಲಿ science sites ಎಂದು ಟೈಪ್ ಮಾಡಿದರೆ ಸಾಕು ವಿಜ್ಞಾನ ಲೋಕ ನಮ್ಮೆದುರಿಗೆ ಪ್ರತ್ಯಕ್ಷವಾಗುತ್ತದೆ.

* ಪರೀಕ್ಷೆ ಎಂದರೆ ಸಾಕು ಮನದಲ್ಲಿ ಏನೋ ಆತಂಕ ಮೂಡುತ್ತದೆ. ಹೆದರಿ ಪರೀಕ್ಷೆಯಿಂದ ಹಿಂದೆ ಸರಿದವರೂ ಇದ್ದಾರೆ. ಕಡಿಮೆಅಂಕ ಅಥವಾ ಫೇಲ್ ಆಗುವ ಭಯದಿಂದ ಆತ್ಮಹತ್ಯೆ ಮಾಡಿಕೊಂಡವರಿದ್ದಾರೆ. ಸರಿಯಾಗಿ ಓದಿದರೆ ಖಂಡಿತವಾಗಿ ಯಶಸ್ಸು ಸಿಗುತ್ತದೆ. ಪರೀಕ್ಷೆಯಲ್ಲಿ ಆತ್ಮ ವಿಶ್ವಾಸ ಹೆಚ್ಚಿಸುವಂತಹ ಅನೇಕ ಮಾಹಿತಿಗಳ ಭಂಡಾರವೇ ಅಂತರ್ಜಾಲದಲ್ಲಿದೆ. ಸರ್ಚ್ ಇಂಜಿನ್ನಿನಲ್ಲಿ school examination technique ಎಂದು ಟೈಪ್ ಮಾಡಿದರೆ ಸಾಕು 5 ಕೋಟಿಗೂ ಹೆಚ್ಚು ತಾಣಗಳು ದೊರೆಯುತ್ತವೆ. ಸಾಕೆ ?

* ಪರೀಕ್ಷೆ ಮುಗಿದ ನಂತರ ಯಾವ ಕಾಲೇಜಿಗೆ ಸೇರಬೇಕು? ಅಲ್ಲಿನ ವ್ಯವಸ್ಥೆ ಹೇಗೆ? ಪ್ರವೇಶ ಪರೀಕ್ಷೆ ನಡೆವ ವಿಧಾನ? ಮುಂತಾದವುಗಳ ಬಗ್ಗೆ ಮೊದಲೆ ತಿಳಿದಿದ್ದರೆ ಸೂಕ್ತ. ತಮ್ಮ ಸಾಮರ್ಥ್ಯವನ್ನು ನೋಡಿಕೊಂಡು ಅದಕ್ಕೆ ತಕ್ಕದಾದ ಕೋರ್ಸ್ ಮತ್ತು ಕಾಲೇಜಿಗೆ ಸೇರಬಹುದು. ಈ ಕುರಿತ ಹೆಚ್ಚಿನ ಮಾಹಿತಿ ಪಡೆಯಲು ಸರ್ಚ್‌ಇಂಜಿನ್ನಿನಲ್ಲಿ adimissions/school adimission ಎಂದು ಟೈಪ್ ಮಾಡಿದರೆ ಸಾಕು ತಾಣಗಳ ಪಟ್ಟಿ ಪಟಪಟನೆ ತೆರೆದುಕೊಳ್ಳುತ್ತವೆ.

* ನಮ್ಮ ದೇಶದ ಅನೇಕ ರಾಜ್ಯಗಳಲ್ಲಿ ಪಠ್ಯಪುಸ್ತಕಗಳನ್ನು ಸೈಟ್‌ಗಳಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಮ್ಮ ರಾಜ್ಯದಲ್ಲಿ ಕೆಲವು ಮಾತ್ರ ಸಿಗುತ್ತವೆ. www.dsert.kar.nic, www.kseeb.org ಮತ್ತು ಸಿ.ಬಿ.ಎಸ್.ಸಿ, ಐ.ಸಿ.ಎಸ್.ಸಿಯ ಸಂಸ್ಥೆಗಳಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸರ್ಚ್‌ಇಂಜಿನ್ನಿನಲ್ಲಿ digital textbook ಎಂದು ಟೈಪ್ ಮಾಡಿದರೆ ತಾಣಗಳು ಪರದೆ ಮೇಲೆ ಕಾಣಿಸುತ್ತವೆ. ಬೇಕಾದುದನ್ನು ಆಯ್ದುಕೊಳ್ಳಬಹುದು. ಪಠ್ಯಪುಸ್ತಕಗಳಿಗೆ ಸಂಬಂಧಿಸಿದಂತೆ ಪೂರಕ ಮಾಹಿತಿಗಳು ಸಿಗುತ್ತವೆ. ಶಿಕ್ಷಕರು, ಪೋಷಕರು ಇವುಗಳ ಸೌಲಭ್ಯ ಪಡೆದುಕೊಳ್ಳಬೇಕಿದೆ.

* ಗಣಿತ ಭೂತ ಅನೇಕ ವಿದ್ಯಾರ್ಥಿಗಳಿಗೆ ಕಾಡುತ್ತಿರುತ್ತದೆ. ಅದೇ ಗಣಿತವನ್ನು ಆಟದ ಮೂಲಕವೂ ಅತ್ಯಂತ ಸರಳವಾಗಿ ಕಲಿತುಕೊಳ್ಳಬಹುದಾಗಿದೆ. ಅಂತಹ ತಾಣಗಳನ್ನು ಬಳಸುವುದರಿಂದ ಗಣಿತದ ವಿಭಿನ್ನ ಲೋಕವೇ ಅನಾವರಣಗೊಳ್ಳುತ್ತದೆ. ಸರ್ಚ್‌ಇಂಜಿನ್ನಿನಲ್ಲಿ easy mathematic ಎಂದು ಟೈಪ್ ಮಾಡಿದರೆ ಗಣಿತದ ಸುಲಭಕಲಿಕಾ ಹಾದಿಗಳು ದೊರಕುತ್ತವೆ.

* ಗಣಿತದಂತೆ ನಮ್ಮ ಮಕ್ಕಳಿಗೆ ಕಗ್ಗಂಟಾಗಿರುವುದು ಇಂಗ್ಲೀಷ್. ಅದರ ಕಲಿಕೆಗೆ ಮಕ್ಕಳು ಸಾಕಷ್ಟು ಹೆಣಗುತ್ತಾರೆ. ಆಂಗ್ಲಭಾಷೆಯ ವ್ಯಾಕರಣ, ಮಾತನಾಡುವಿಕೆ ಸೇರಿದಂತೆ ಅನೇಕ ವಿಧದ ಮಾಹಿತಿಗಳನ್ನು ಅಂತರ್ಜಾಲದಿಂದ ಪಡೆಯಬಹುದು. ಸರ್ಚ್‌ಇಂಜಿನ್ನಿನಲ್ಲಿ easy english ಎಂದು ಟೈಪ್ ಮಾಡಿ ಹುಡುಕಲು ಹೇಳಿದ 16 ಸೆಕೆಂಡುಗಳಲ್ಲಿ 29,50,00,000ಕ್ಕೂ ಹೆಚ್ಚು ತಾಣಗಳು ಸಿಗುತ್ತವೆ.

ಹೀಗೆ ತಾಣಗಳ ಕುರಿತು ಒಂದೊಂದಾಗಿ ವಿವರಣೆ ನೀಡುತ್ತಾ ಹೋದರೆ ಪುಟಗಳೇ ಸಾಲದು. ಇಲ್ಲಿ ಅತ್ಯಂತ ಪ್ರಮುಖವಾದ ಕೆಲವನ್ನು ಮಾತ್ರ ತಿಳಿಸಲಾಗಿದೆ. ಈ ಕುರಿತಾಗಿ ಬೇದ್ರೆ ಮಂಜುನಾಥರವರ ವೆಬ್‌ಸೈಟ್, ಸಿ.ಡಿ. ಮತ್ತು ಡಿಜಿಟಲ್ ಪುಸ್ತಕಗಳು ಮತ್ತು ಟಿ.ಜಿ.ಶ್ರೀನಿಧಿಯವರ ಟೆಕ್ ಬುಕ್, ಬೆರಳ ತುದಿಯ ಬೆರಗು, ಟೆಕ್ ಲೋಕದ ಹತ್ತು ಹೊಸ ಮುಖಗಳು ಸೇರಿದಂತೆ ಇನ್ನು ಹಲವಾರು ಪುಸ್ತಕಗಳು ಕನ್ನಡದಲ್ಲಿಯೇ ಲಭ್ಯವಿವೆ. ಅವುಗಳನ್ನು ಗಮನಿಸುತ್ತಾ ಬೇಕಾದ ವಿಷಯದ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿಯನ್ನು ಹೆಕ್ಕಿ ತೆಗೆದು ಬಳಸಿಕೊಳ್ಳಬಹುದು. ಅದನ್ನು ಬಳಸಿಕೊಳ್ಳುವ ಜಾಣ್ಮೆ ನಮ್ಮಲ್ಲಿರಬೇಕಷ್ಟೆ.

ನಾಡಿನ ಖ್ಯಾತ ಬರಹಗಾರರಾದ ಬೇದ್ರೆ ಮಂಜುನಾಥರವರು ಹೇಳುವಂತೆ "ಮಾಹಿತಿ ತಂತ್ರಜ್ಞಾನದ ಕಾಶಿ ಎಂದು ನಮ್ಮ ಬೆಂಗಳೂರನ್ನು ಜಗತ್ತೇ ಹಾಡಿ ಹೊಗಳುತ್ತಿದೆ. ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರಗಳು ನಮ್ಮಲ್ಲಿ ಕೆಲವೇ ಜನಕ್ಕೆ ಸೀಮಿತವಾಗಿವೆ. ಬದಲಾಗಿ ಜನಸಾಮಾನ್ಯರಿಗೂ ಅದರಲ್ಲೂ ಭವಿಷ್ಯದ ಆಶಾಕಿರಣಗಳಾದ ಮಕ್ಕಳಿಗೂ ಆ ನೂತನ ಆವಿಷ್ಕಾರಗಳು ತಲುಪಿ, ಅದನ್ನು ಅವರು ಅರ್ಥಪೂರ್ಣವಾಗಿ ಬಳಸಿಕೊಂಡಲ್ಲಿ ಅದರ ಸಾರ್ಥಕತೆ ಕಾಣಬಹುದೆ" ಎಂಬ ಮಾತುಗಳು ಹೆಚ್ಚು ಸಮಂಜಸವಾಗಿವೆ. ಅವರ ಹೇಳಿಕೆಯಂತೆ ಅಂತರಜಾಲವನ್ನು ಸಾಮಾನ್ಯ ಜನರು ಮತ್ತು ಎಲ್ಲ ಮಕ್ಕಳೂ ಸದ್ಬಳಕೆ ಮಾಡಿಕೊಂಡಲ್ಲಿ ಅದು ಜ್ಞಾನದ ಆಲಯವಾಗುವುದರಲ್ಲಿ ಅನುಮಾನವಿಲ್ಲ.

# ನಾಡು ಸರ್ವ ಜನಾಂಗದ ಶಾಂತಿಯ ತೋಟವಾಗಲಿ


## ಫ್ರೀಡಂಪಾರ್ಕಿಗೆ ಅಲ್ಲಮ ಪ್ರಭು ಹೆಸರು: ಸಿ.ಎಂ.ಸಿದ್ದರಾಮಯ್ಯ ಮಹತ್ವದ ಘೋಷಣೆ । ಯುವಕರಿಗೆ ಯುವನಿಧಿ ಜೊತೆ ಕೌಶಲ್ಯ ತರಬೇತಿ

**ಹಂಪಿ ಟೈಮ್ಸ್ ಶಿವಮೊಗ್ಗ**


ಯಾವ ಧರ್ಮದಲ್ಲಿ ಹಸಿದವರಿಗೆ ಅನ್ನ ಕೊಡುವುದಿಲ್ಲವೋ ಅಂಥ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ ಎಂದು ವಿವೇಕಾನಂದರು ಘೋಷಿಸಿದ್ದರು. ಅವರ ಜನ್ಮ ದಿನದಂದೇ ಯುವಕ ಯುವತಿಯರ ಭವಿಷ್ಯಕ್ಕೆ ಶಕ್ತಿ ತುಂಬುವ ಸಲುವಾಗಿ ಯುವನಿಧಿ ಜಾರಿ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶಿವಮೊಗ್ಗದಲ್ಲಿ ಲಕ್ಷಾಂತರ ಯುವಸಮೂಹದ ಸಮ್ಮುಖದಲ್ಲಿ ರಾಜ್ಯ ಸರ್ಕಾರದ ಐತಿಹಾಸಿಕ ಗ್ಯಾರಂಟಿ "ಯುವನಿಧಿ" ಯೋಜನೆಯನ್ನು ಉದ್ಘಾಟಿಸಿ ಮಾತನಾಡಿದರು. ನಾನು ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸುರ್ಜೇವಾಲ ಅವರು ಚುನಾವಣಾ ಪೂರ್ಣ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ.

ನಿರುದ್ಯೋಗ ಸಮಸ್ಯೆ, ರೈತರ ಸಮಸ್ಯೆ ಹೆಚ್ಚಾಗಿ, ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಿರುವ




ಸಂದರ್ಭದಲ್ಲಿ ಸಮಾಜದ ಎಲ್ಲಾ ವರ್ಗಗಳ ಸಮಸ್ಯೆಗೆ ಪರಿಹಾರವಾಗಿ ನಾವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿದೆವು. ಪ್ರಣಾಳಿಕೆಯಲ್ಲಿ ಘೋಷಿಸಿದೆವು. ಘೋಷಿಸಿದಂತೆ ಜಾರಿ ಮಾಡಿದ್ದೇವೆ. ಮೊದಲ ಗ್ಯಾರಂಟಿ ಯೋಜನೆಯಿಂದಾಗಿ 130 ಕೋಟಿ 28 ಲಕ್ಷ ಮಹಿಳೆಯರು, ಯುವತಿಯರು ಉಚಿತವಾಗಿ ಪ್ರಯಾಣ ಮಾಡಿದ್ದಾರೆ. 1 ಕೋಟಿ 65 ಲಕ್ಷ ಕುಟುಂಬಗಳಿಗೆ ಉಚಿತವಾಗಿ 200 ಯೂನಿಟ್ ವರೆಗೂ ಉಚಿತ ವಿದ್ಯುತ್ ನೀಡುತ್ತಿದ್ದೇವೆ. ಈ




ಕೋಟಿ ಕುಟುಂಬಗಳು ನಯಾಪೈಸೆ ವಿದ್ಯುತ್ ಬಿಲ್ ಕಟ್ಟುವ ಹಾಗಿಲ್ಲ. ಇದೇ ರೀತಿ 5 ಕೆಜಿ ಅಕ್ಕಿ, 5 ಕೆಜಿ ಅಕ್ಕಿಯ ಹಣವನ್ನು ಪ್ರತೀ ಕುಟುಂಬಗಳಿಗೆ ಕೊಡುತ್ತಿದ್ದೇವೆ. 1 ಕೋಟಿ 17 ಲಕ್ಷ ಮಹಿಳೆಯರಿಗೆ, ಯುವತಿಯರಿಗೆ ಪ್ರತೀ ತಿಂಗಳು 2000 ರೂ ತಲುಪಿಸುತ್ತಿದ್ದೇವೆ. ಇಂಥಾ ಸಾಧನೆ ಹಿಂದೆ ಯಾವ ಕಾಲದಲ್ಲೂ ಆಗಿಲ್ಲ. ನುಡಿದಂತೆ ಮಾಡಿ ತೋರಿಸಿದ ಸರ್ಕಾರ ನಮ್ಮದು. ಯುವಕ ಯುವತಿಯರಿಗೆ ಹಣದ ಜತೆಗೆ ಉದ್ಯೋಗ ಪಡೆದುಕೊಳ್ಳಲು ಅಗತ್ಯವಾದ ಕೌಶಲ್ಯ ತರಬೇತಿಯನ್ನೂ ನೀಡಿ ಅವರಿಗೆ ಉದ್ಯೋಗ ಕೊಡಿಸುವ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಮುಂದುವರೆಯಲಿದೆ ಎಂದರು.

ಈಗಾಗಲೇ 70 ಸಾವಿರ ಯುವಕ ಯುವತಿಯರು ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಪ್ರತಿ ಯುವಕ ಯುವತಿಯರು ಯೋಜನೆಗೆ ನೋಂದಾಯಿಸಿಕೊಂಡು ಅನುಕೂಲ ಪಡೆದುಕೊಳ್ಳಿ. ಹೋರಾಟದ ಹಿನ್ನೆಲೆಯ ಜಿಲ್ಲೆ ಶಿವಮೊಗ್ಗದಿಂದಲೇ "ರಾಜ್ಯ ಸರ್ವ ಜನಾಂಗದ ಶಾಂತಿಯ ತೋಟ" ಆಗಲಿ. ಎಂದು ಕರೆ ನೀಡಿದರು.

ಡಿಸಿಎಂ ಡಿ.ಕೆ.ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ಇಂಧನ ಸಚಿವ ಕೆ.ಜೆ.ಜಾರ್ಜ್, ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕ್ರೀಡಾ ಸಚಿವ ನಾಗೇಂದ್ರ, ಮೀನುಗಾರಿಕಾ ಸಚಿವ ಮಾಂಕಳ ವೈದ್ಯ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಸಂಸದ ಬಿ.ವೈ.ರಾಘವೇಂದ್ರ, ಶಾಸಕರು ಸೇರಿ ಹಲವು ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
HAMPI TIMES

ಶನಿವಾರ / Saturday 13.01.2024

ವಿಜಯನಗರ



ಕವಿ ಮನಸು

## ದುಂಡು ಮಲ್ಲಿಗೆ



ದುಂಡು ಮಲ್ಲಿಗೆ ಕೊಂಡು ತಂದರೆ
ಬುಟ್ಟಿ ತುಂಬಿದೆ ಹೂಗಳು
ಗಿಡದಲರಳಲು ಮೂಡಿ ಬಯಕೆಯು
ಮನವು ಬಂದಿತೆ ಕೀಳಲು॥

ಬೆಣ್ಣೆ ಕೃಷ್ಣನು ಮಡಕೆ ಇಳಿಸಲು
ಮೊಸರು ಚೆಲ್ಲಿತೆ ಸುತ್ತಲು
ಹಾಲು ಉಕ್ಕಿತೆ ನೊರೆಯು ಚೆಲ್ಲಿತೆ
ಚಂದವೆನಿಸಿದೆ ನೋಡಲು॥


ಮುಚ್ಚಿ ಇಟ್ಟರು ಕಂಪು ಸೂಸುವ
ದುಂಡು ಮಲ್ಲಿಗೆ ಹೂಗಳು
ಕರದಿ ಪೋಣಿಸಿ ಹೆಣೆದು ಮಾರಲು
ಬಯಸಿ ಬಾರರೆ ಕೊಳ್ಳಲು?॥

ಬಿಡಿಯ ಹೂಗಳು ಬಳಸೆ ಪೂಜೆಗೆ
ಭಕ್ತಿ ತುಂಬಿದ ಮನದೊಳು
ಮಾಲೆ ಮಾಡಲು ಮೆರೆಯಲಿರುವುದು
ಮುಡಿದ ನಾರಿಯ ತುರುಬೊಳು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




## ತುಂಗಭದ್ರಾ ನೀರಿನ ಮಟ್ಟ



| ಶುಕ್ರವಾರ : 12-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.97 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.190 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1621.97 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8115 ಕ್ಯುಸೆಕ್ |
| ಸಾಮರ್ಥ್ಯ | 67.021 ಟಿಎಂಸಿ |

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ತನು ಮನ ಧನ – ಗುರು ಲಿಂಗ ಜಂಗಮಕೆ

## ಮನುಷ್ಯ ಹುಟ್ಟಿನ ಜತೆಗೆ ಧನ ಮೂಟೆ ತಂದಿರುವನೆ? ಗಳಿಸಿದುದನ್ನು ಜತೆಗೆ ಕೊಂಡೊಯ್ಯುವನೆ?

ತನು, ಮನ, ಧನದಿಂದ ಸಹಾಯ ಮಾಡುವುದು, ಸೇವೆ ಮಾಡುವುದು ಅಥವಾ ಅರ್ಪಿಸುವುದು ಹೀಗೆ ಬೇರೆ ಬೇರೆ ರೀತಿಯಾಗಿ ಹೇಳುವುದು ಎಲ್ಲರಿಗೂ ತಿಳಿದ ವಿಷಯ. ಈ ಮೂರು ವಸ್ತುಗಳು ಬದುಕಿಗೆ ಒಂದಿಲ್ಲ ಒಂದು ರೀತಿ ಅಂಟಿಕೊಂಡೇ ಇರುತ್ತವೆ.

ಜೀವನವನ್ನು ಸಾಗಿಸಲು ಬೇಕಾಗುವ ಅನೇಕ ವಸ್ತುಗಳ ಅವಶ್ಯಕತೆಗಳಲ್ಲಿ ತನು, ಮನ ಮತ್ತು ಧನಗಳೂ ಕೂಡಾ ಅವಶ್ಯಕ. ಆದರೆ ಇವು ಎಷ್ಟಿರಬೇಕು? ಹ್ಯಾಗಿರಬೇಕು? ನೆಮ್ಮದಿಯ ಬದುಕಿಗೆ ಬಳಕೆ ಹೇಗಿರಬೇಕು? ಎಂಬುದು ಮುಖ್ಯ.

ಶಿಸು ಅವಸ್ಥೆಯಲ್ಲಿ ತಿನಿಸಿದ್ದನ್ನು ತಿನ್ನುವುದು, ಯಾಕೆಂದರೆ ತಿಳುವಳಿಕೆ ಇರುವುದಿಲ್ಲ. ಬಾಲ್ಯಾವಸ್ಥೆಯಲ್ಲಿ ಹಟಮಾಡಿ ತಿನ್ನುವುದು ಯಾಕೆಂದರೆ ಆಸೆ ಆರಂಭವಾಗುತ್ತದೆ. ಯವ್ವನಾವಸ್ಥೆಯಲ್ಲಿ ಬೇಕು ಬೇಡವಾದನ್ನೂ ತಿನ್ನುವುದು ಯಾಕೆಂದರೆ ಪ್ರತಿಷ್ಟೆ, ಇನ್ನೊಬ್ಬರೊಡನೆ ಹೋಲಿಕೆ ನಾನು ಅತ್ಯಂತ ಬಲಶಾಲಿ ಎನ್ನುವ ಕೊಬ್ಬು. ನಂತರ ಮುಪ್ಪಾವಸ್ಥೆಯಲ್ಲಿ ಪುನಃ ಶಿಸು ಅವಸ್ಥೆಗೆ ಮರಳುವುದಲ್ಲದೇ ಜತೆಗೆ ಔಷಧಗಳೊಂದಿಗೆ ಬದುಕುವುವುದು ಸಾಮನ್ಯವಾಗಿ ಕಂಡು ಬರುವ ಅಂಶ. "ತನು"ವು ಇದ್ದಹಾಗೇ ಇರುವುದಿಲ್ಲ, ಮತ್ತು ಶಾಶ್ವತವೂ ಅಲ್ಲ ಎನ್ನುವ ಕಟು ಸತ್ಯ ಗೊತ್ತಿದ್ದರೂ ಅದನ್ನು ಸಮತೋಲನದಲ್ಲಿಟ್ಟುಕೊಳ್ಳುವ ಗೋಜಿಗೆ ಹೋಗುವುದೇ ಇಲ್ಲ. ಅವ್ಯವಸ್ಥೆಯ ದಾರಿಯಲ್ಲಿ ಸಾಗಿದರೆ ತನುವು ಸ್ಥೂಲವಾಗಿಯೋ ಇಲ್ಲಾ ತೀರ ಸಣಕಲಾಗಿಯೋ ಇರುತ್ತದೆ. ಇದಕ್ಕಿರುವ ಮಾರ್ಗವೆಂದರೆ ಪ್ರಜ್ಞಾವಸ್ಥೆಯಿಂದಲೇ ದೇಹವನ್ನು ಹಿತಮಿತವಾಗಿ ದಂಡಿಸಬೇಕು. ಅಂದರೆ ಶ್ರಮದಾನ, ವ್ಯಾಯಾಮ, ಯೋಗಗಳ ಮೊರೆ ಹೋಗಬೇಕು. ತಿನ್ನುವ ಕುಡಿಯುವ ಐಷಾರಮಿಯ ದುಶ್ಚಟಗಳ ಜೀವನ ಶೈಲಿಗೆ ಅಂಟಿಕೊಳ್ಳಬಾರದು. ಹಾಗೂ ಅನಾವಶ್ಯಕ ಆಸೆಗಳನ್ನು ತ್ಯಜಿಸಿ ಇರುವವರೆಗೆ ತನುವನ್ನು ಸಾಧ್ಯವಾದಷ್ಟು ಕಾಪಾಡಿಕೊಳ್ಳಬೇಕು.

**"ಕಲ್ಮಷದ ವಲ್ಮೀಕವೆಂದೊಡಲ ಜರೆಯದಿರು,
ಬ್ರಹ್ಮಪುರಿಎಂದದನು ಋಷಿಗಳೊರೆದಿಹರು.
ಹಮ್ಮುಳ್ಳ ಹಯವ ಕಾಪಿಟ್ಟು ಕಡಿವಣ ತೊಡಿಸೆ,
ನಮ್ಮ ಗುರಿಗೈದಿಪುವು–ಮಂಕುತಿಮ್ಮ"**

ದೇಹವನ್ನು ಕಲುಷಿತ ಹುತ್ತೆಂದು ಜರಿಯಬೇಡ, ಇದು ಬ್ರಹ್ಮನ ಆವಾಸಸ್ಥಾನವೆಂದು ಋಷಿಮುನಿಗಳು ಹೇಳಿದ್ದಾರೆ.ಉತ್ಸಾಹದ ಕುದುರೆಗೆ ಕಡಿವಾಣ ಹಾಕಿದರೆ ಕಲ್ಪಿತ ಗುರಿಯನ್ನು ಸಾರಾಗವಾಗಿ ಸಾಗಿಸಬಹುದು. ಹಾಗೆಯೇ ನಮ್ಮ ದೇಹವನ್ನು ಸರಿಯಾಗಿ ಕಾಪಾಡಿಕೊಂಡು ಜೀವನ ಸಾಗಿಸಿದರೆ ಇಚ್ಚಿತ ಗುರಿಸಾಧನೆಗೆ ಮಾರ್ಗವಾದೀತು ಎಂದು ಡಿ.ವಿ.ಜಿ.ಅವರು ಮಾರ್ಮಿಕವಾಗಿ ತಿಳಿಸಿದ್ದಾರೆ.

ಇನ್ನು "ಮನ". ಅಂದರೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಆನಂದದಿಂದ ಇರುವುದೆಂದರೆ ಹೇಳಿದಷ್ಟು ಸುಲಭವಲ್ಲ. ಮನಸ್ಸಿನ ಬಗ್ಗೆ ಅನೇಕ ವಿದ್ವಾಂಸರು, ಪಂಡಿತರು, ಋಷಿ ಮುನಿಗಳು,ಮಾನಸೀಕ ತಜ್ಞರು ಅದ್ಬುತ ವ್ಯಾಖ್ಯಾನಗಳನ್ನೇ ಕೊಟ್ಟಿದ್ದರೂ ಬಹುತೇಕ ಜನರ ನಿಯಂತ್ರಣ ತಪ್ಪುತ್ತಿರುವುದು ಸತ್ಯ.

ಚಂಚಲತೆಯ ಮನಸ್ಸು ಕ್ಷಣಾರ್ಧದಲ್ಲಿ ತನ್ನ ಮಾರ್ಗ ಬದಲಿಸಿದ್ದು ಗೊತ್ತೇ ಅಗುವುದಿಲ್ಲ. ಅದರಿಂದ ಸಾಕಷ್ಟು ಕೋಲಾಹಲಗಳು ಸೃಷ್ಠಿಯಾಗುತ್ತವೆ. ಅದನ್ನರ್ಥ ಮಾಡಿಕೊಳ್ಳುವಷ್ಟರಲ್ಲಿ ಕಾಲ ಗತಿಸಿ ಹೋಗಿರುತ್ತದೆ. ಮನಸ್ಸಿನ ಮೇಲೆ ಹಣ, ಆಕರ್ಷಣೆ, ಮತ್ಸರ, ದುರಹಂಕಾರ ಮತ್ತು ಅತೀಯಾಸೆಗಳ ಪ್ರಭಾವ ಬೇಗನೇ ಆಗುತ್ತದೆ. ಆಗ ಅದು ತಪ್ಪು ಎಂದು ಅನಿಸುವುದೇ ಇಲ್ಲ. ತತ್ಪರಿಣಾಮ ಸಂಕಷ್ಟಕ್ಕೀಡಾಗ ಬೇಕಾಗುತ್ತದೆ. ಆಗ ಯಾತನೆ ಇನ್ನೂ ಹೆಚ್ಚಾಗಿ ಸಂಬಂಧಗಳನ್ನು ಆತ್ಮಸ್ಥೈರ್ಯವನ್ನೂ ಕಳೆದುಕೊಂಡು ದೈವ, ಕಾಲ, ಅಥವಾ ಇನ್ನೊಬ್ಬ ಮತ್ತೊಬ್ಬರನ್ನು ದೂಷಿಸುತ್ತ ಕೊರಗಬೇಕಾಗುತ್ತದೆ. ಇದರಿಂದ ನೆಮ್ಮದಿ ಹಾಳಾಗುತ್ತದೆ.

ಇಂತಹ ಸಂದರ್ಭಗಳಿಂದ ಪಾರಾಗಲು ದಾರಿ ಇಲ್ಲವೆಂದೇನಿಲ್ಲ.

"ನೆಮ್ಮದಿಯನ್ನು ಪಡೆಯಲು ಸತ್ಯಜ್ಞಾನದ ಅರಿವಿರಬೇಕು, ಮನಸ್ಸು ವಿಕಸಿತಗೊಳ್ಳಬೇಕು ಮತ್ತು ಎಲ್ಲ ಮೇರೆಗಳನ್ನು ಕಳಚಿರಬೇಕು ಅಂದಾಗ





ಲಕುಮಿಸುತ ಸಾರವಾಡ
ಹೊಸಪೇಟೆ

ಮನಸ್ಸಿಗೆ ನೆಮ್ಮದಿ ಸಾದ್ಯ" ಎಂದು ಜ್ಞಾನಯೋಗಾಶ್ರಮ ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ತಮ್ಮ ಪ್ರವಚನದಲ್ಲಿ ಎಳೆಎಳೆಯಾಗಿ ಎಂಥವರಿಗೂ ಅರ್ಥವಾಗುವಂತೆ ಉಪದೇಶಿಸಿದ್ದಾರೆ.

ಭಗವಂತ ಭೂಮಿಗೆ ಕಳಿಸುವಾಗ ಗುಣ– ಅವಗುಣಗಳನ್ನು ಕೊಟ್ಟು ಪೂರ್ವ ಕರ್ಮ ಫಲದೊಂದಿಗೆ ವಿಧಿಲಿಖಿತದಂತೆ

ಬಾಳಿ ಬದುಕಿ ಬರಲು ಕಳಿಸಿರುತ್ತಾನೆ. ಆದರೆ ಮನುಷ್ಯ ತೆಗೆದುಕೊಳ್ಳುವ ನಿರ್ಧಾರ, ಗುಣಾವಗುಣಗಳನ್ನು ಬಳಸುವಿಕೆ, ಅಲ್ಲದೇ ತಪ್ಪು ಸರಿ ಎನ್ನುವ ಮನಸ್ಸಿನ ನಿರ್ಧಾರವನ್ನು

ಹೀಗೆಯೇ ಮಾಡು ಎಂದು ಹೇಳಿರುವುದಿಲ್ಲ. ಆದರೆ ಅವುಗಳನ್ನು ನಿರ್ಧರಿಸಲು ಹೃದಯ ಮತ್ತು ವಿವೇಕವನ್ನು ಕೊಟ್ಟಿರುತ್ತಾನೆ. ಅವುಗಳನ್ನು ಸರಿಯಾದ ಕ್ರಮದಲ್ಲಿ ಬಳಸಿದರೆ ಸನ್ಮಾರ್ಗ, ಸತ್ಕರ್ಮ, ಮತ್ತು ಉತ್ತಮ ಗುಣಗಳ ಅಳವಡಿಕೆಯಿಂದ ಇದೇ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ಅಥವಾ ಸಮತೋಲನದಲ್ಲಿಟ್ಟುಕೊಂಡು ನೆಮ್ಮದಿಯ ಬದುಕು ಸಾಗಿಸಲು ಸಾದ್ಯ. ಇಂತಹ ಭಾರವಾದ ಮನಸ್ಸಿಗೆ ಮದ್ದು ಎಂದರೆ "ಧ್ಯಾನ". ಅಂದರೆ ಮನವನ್ನು ಧ್ಯಾನದಿಂದ ನಿಯಂತ್ರಿಸಲು ಸಾದ್ಯ. ಈ ಧ್ಯಾನದಲ್ಲಿ ತೊಡಗಬೇಕಾದರೆ ನಂಬಿಕೆಯ ದೈವತ್ವದ ಮನಸ್ಸಿನೊಂದಿಗೆ ಗುರು ಮಾರ್ಗದರ್ಶನದಿಂದ ಸಾಧ್ಯವಾಗುತ್ತದೆ.

ತನು ಹಾಗೂ ಮನದಷ್ಟೇ ಪ್ರಮುಖವಾದ ಇನ್ನೊಂದು ವಸ್ತುವೇ "ಧನ". ಅಂದರೆ ಹಣ, ಸಂಪತ್ತು ಒಡವೆ ಇತ್ಯಾದಿಗಳು.

ಧನ ಹಾಗೂ ಮನಸ್ಸಿಗೂ ತೀರ ಹತ್ತಿರದ ಸಂಬಂಧವಿದೆ. ಧನ ಇದ್ದಾಗಲೂ ಇಲ್ಲದಾಗಲೂ ಮನಸ್ಸಿನ ವರ್ತನೆ ಬೇರೆ ಬೇರೆಯಾಗಿರುತ್ತದೆ. ಅದರ ಪರಿಣಾಮವೇ ಸುಖ ದುಃಖ ಗಳಿಗೆ ಎಡೆಮಾಡಿ ಕೊಡುತ್ತದೆ. ಧನವಿದ್ದರೆ ಸಂತೋಷವಿರುತ್ತದೆ ಎಂದು, ಧನವಿಲ್ಲದವರು ಚಿಂತನೆ ಮಾಡುತ್ತಾರೆ. ಹಾಗೇಯೇ ಧನವಿದ್ದವರು, ಧನದ ವಿಯೋಗ ಮತ್ತು ಜೋಪಾನದ ಚಿಂತೆಯಲ್ಲಿ ಮುಳುಗಿ, ಧನವಿರದಿದ್ದರೆ ಚಿಂತೆ ಇರುತ್ತಿರಲಿಲ್ಲ ಎಂದೊಮ್ಮೆ ಯೋಚಿಸುವುದೂ ಉಂಟು. "ದುಡ್ಡೇ ದೊಡ್ಡಪ್ಪ" " ಹಣ ಎಂದರೆ ಹೆಣ ಬಾಯಿ ಬಿಡುತ್ತದೆ" "ಕಾಸಿದ್ರೆ ಕೈಲಾಸ" ಎಂದೆಲ್ಲಾ ಗಾದೆ, ನುಡಿಗಳುಂಟು. ಹಾಗಂತ ದುಡ್ಡೇ ಜೀವನಕ್ಕೆ ಪರಮ ಶ್ರೇಷ್ಠ ಆಗುವುದಿಲ್ಲ.

ಹಾಗಾದರೆ ಧನ ಜೀವನಕ್ಕೆ ಬೇಡವೆ? ಹೌದು. ಧನ ಬದುಕಿಗೆ ಬೇಕು. ಹಾಗಿದ್ದರೆ ಧನ ಏಕೆ ಬೇಕು? ಗಳಿಸುವುದು ಹೇಗೆ? ಈ ಗಳಿಕೆಯಲ್ಲಿ ಉಳಿಸುವುದು ಹೇಗೆ? ಅದರಂತೆ ಬಳಸುವುದು ಹೇಗೆ? ಬಳಸಿ ಉಳಿದರೆ ಕಾಯುವುದು ಹೇಗೆ? ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ.

ಪ್ರಸ್ತುತ ಕಾಲದಲ್ಲಿ ಧನ/ಹಣ ನಮ್ಮ ಬದುಕು ಸಾಗಿಸಲು ಜೀವನಾವಶ್ಯಕ ವಸ್ತುಗಳನ್ನು ಖರೀದಿಸಲು ಬೇಕು. ಕೆಲವರಿಗೆ ಬರೀ ಕೂಡಿಡುವ ಮತ್ತು ಆಗರ್ಭ ಸಿರಿವಂತನೆನಿಸಿಕೊಳ್ಳುವ ಪ್ರತಿಷ್ಟೆಗೆ ಬೇಕು. ಇನ್ನು ಕೆಲವರಿಗೆ ಐಷಾರಾಮಿ ಜೀವನಕ್ಕೆ ಬೇಕು. ಹೀಗೆ ಹತ್ತು ಹಲವು ಉದ್ದೇಶಗಳಿಗೆ ಬೇಕು.

ಈ ಬೇಕಾಗುವ ಧನವನ್ನು ಗಳಿಸುವ ಮಾರ್ಗಗಳು ಅನೇಕ. ನಿರ್ಮಲ ಮನದಿ ಕಾಯಕದೊಂದಿಗೆ ಗಳಿಸುವುದು, ಪ್ರಾಮಾಣಿಕ ವ್ಯಾಪಾರೋದ್ಯಮದ ಮೂಲಕ ಮತ್ತು ಮೋಸ, ವಂಚನೆ, ಬೃಷ್ಟಾಚಾರ, ಜೂಜು ಇನ್ನಿತರ ಅಡ್ಡ ದಾರಿಯಿಂದಲೂ ಗಳಿಸುವುದು.

ಗಳಿಸಿದ ಹಣವನ್ನು ಉಳಿಸುವ ಉಪಾಯವೆಂದರೆ, ತಮ್ಮ ಬೆವರಿನ ದುಡಿಮೆಯಲ್ಲಿ ಜೀವನಕ್ಕೆ ಬೇಕಾಗುವ ಅವಶ್ಯಕ ವಸ್ತುಗಳಿಗೆ ಮಾತ್ರ ವಿಯೋಗಿಸಿ, ವೆಚ್ಚಕ್ಕೆ ಕಡಿವಾಣ ಹಾಕುತ್ತ ತಕ್ಕ ಮಟ್ಟಿಗೆ ಉಳಿಸುತ್ತ ತೃಪ್ತಿಕರ ಜೀವನ ಸಾಗಿಸುವ ಒಂದು ಗುಂಪಾದರೆ, ಅಡ್ಡದಾರಿಯಿಂದ ಗಳಿಸಿವವರು ಹಪಾಪಿತನದಿಂದ ಕೂಡಿಡುವುದರಲ್ಲಿಯೇ ಕಾಲ ಕಳೆಯುತ್ತಾರೆ. ಇವರು ತಮ್ಮ ಪ್ರತಿಷ್ಟೆ ಪ್ರಶ್ನೆ ಬಂದಾಗ, ಆಂತರಿಕ ಸ್ವಾರ್ಥದ ಉದ್ದೇಶದಿಂದ ಖರ್ಚೂ ಮಾಡುತ್ತಾರೆ. ತಮ್ಮ ಪೂರ್ವಜರು ಕೂಡಿಟ್ಟ ಸಂಪತ್ತನ್ನು ಸದ್ವಿನಿಯೋಗ ಮಾಡುವವರಿಗಿಂತ ಅನಾವಶ್ಯಕ ದುಂಧು ವೆಚ್ಚ ಮಾಡುವವರೇ ಹೆಚ್ಚು. ಯಾಕೆಂದರೆ ಅವರಿಗೆ ದುಡಿಮೆ ಬೆಲೆ ಗೊತ್ತಿರುವುದಿಲ್ಲ.

ತಮ್ಮ ತಮ್ಮ ಅವಶ್ಯಕತೆಗಿಂತ ಮತ್ತು ಆಪತ್ತಿಗೆ ಬೇಕಾಗುವ ಕೂಡಿಟ್ಟ ನಿಧಿಯನ್ನು ಬಿಟ್ಟು ಇನ್ನೂ ಹೆಚ್ಚುವರಿ ಸಂಪತ್ತು ಇದ್ದರೆ ಅದರ ಸದ್ಬಳಕೆಗೆ ಬೇಕಾದಷ್ಟು ದಾರಿಗಳುಂಟು. ಯೋಗ್ಯ ವ್ಯಕ್ತಿಗಳಿಗೆ "ದಾನ", ಸಾಮಾಜಿಕ ಕಾಳಜಿಯ ಸ್ವಚ್ಚತೆ, ಶಿಕ್ಷಣ, ಆರೋಗ್ಯ ದಾಸೋಹ ವಿಷಯಗಳಲ್ಲಿ ಉಚಿತ ಸೇವೆ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ದಾನ ರೂಪದಲ್ಲಿ ಸೇವೆಗೈಯ್ಯಬಹುದು.

**"ಹುಟ್ಟುವಾಗಲೆ ಧನವ ।
ಮೂಟೆ ಗಟ್ಟಿಳಿದಿಹನೆ?
ಕಟ್ಟಕಡೆಯಲಿ ಕೊಂಡೊಯ್ಯ, ನಿದನರಿದು ।
ಕೊಟ್ಟುಂಬ ದಾನಿ ಸರ್ವಜ್ಞ॥**

ಮನುಷ್ಯ ಹುಟ್ಟಿನ ಜತೆಗೆ ಧನ ಮೂಟೆ ತಂದಿರುವನೆ? ಗಳಿಸಿದುದನ್ನು ಜತೆಗೆ ಕೊಂಡೊಯ್ಯುನೆ? ಇಲ್ಲ. ಹಾಗಾಗಿ ಇದನ್ನರಿತು ದಾನ ಮಾಡಿ ಉಣ್ಣಬೇಕು ಎಂಬ ಸರ್ವಜ್ಞನ ನುಡಿ ಸ್ಮರಿಸಬಹುದು.
ಹೀಗೆ ಧನದ ಗಳಿಕೆ, ಉಳಿಕೆ, ಮತ್ತು ಬಳಕೆಗಳನ್ನು ಅರ್ಥ ಮಾಡಿಕೊಂಡು ಧನಾತ್ಮಕ ವಿಚಾರಗಳೊಂದಿಗೆ ಸಾಗುವುದೇ ಸಾರ್ಥಕ ಬದುಕು.

ತನುವನ್ನು ಗುರುವಿಗೆ । ಮನವನ್ನು ಲಿಂಗಕ್ಕೆ ।
ಧನವ ಜಂಗಮಕೆ ವಂಚಿಸದ ಭಕ್ತಂಗೆ ।
ಅನಘ ಪದವಹುದು ಸರ್ವಜ್ಞ ॥

ದೇಹವನ್ನು ಗುರುಸೇವೆಗೆ ಸವೆಸು, ಮನಸನ್ನು ದೇವರಲ್ಲಿ ತೊಡಗಿಸು, ಧನವನ್ನು ಸತ್ಪಾತ್ರ ದಾನಕ್ಕೆ ಬಳಸುವುದೇ ಮೊಕ್ಷದ ಮಾರ್ಗ, ಎನ್ನುವ ಸರ್ವಜ್ಞನ ನುಡಿ. ದೈವತ್ವದ ಭಾವನೆಯಿಂದ ತನು, ಮನ ಮತ್ತು ಧನ ಸದ್ವಿನಿಯೋಗಿಸಿದರೆ ನೆಮ್ಮದಿಯ ಬದುಕು ಕಾಣಬಹುದು.

# ಕಳೆದುಹೋದ ರೈತನ ಕಣಗಳು

ರಸ್ತೆಗಳೆಲ್ಲಾ ಕಣಗಳಾಗುವ ಕಾಲ ಬಂದಾಯಿತು, ಆದರೀಗ ಕಣಗಳು ತಮ್ಮ ಕಂಕಣಗಳನ್ನು ತೊರೆದು ನಿಲಯಗಳಾಗಿ ಮಾರ್ಪಟ್ಟಿವೆ.ಅಂದು ರೈತನ ಕೈಗೆ ಫಸಲು ಬಂದಾಗ ಒಕ್ಕಲು,ತೂರಲು,ಮನೆಯ ಸಮೀಪದ ಜಾಗವನ್ನು ಗುಡಿಸಿ, ಸಗಣಿಯಿಂದ ಸಾರಿಸಿ, ಕಣವೆಂದು ಮಾಡಿಕೊಂಡು, ಹೊಲದಲ್ಲಿ ಬೆಳೆದ ಬೆಳೆಯನ್ನು ಹೊತ್ತುತಂದು ಕಣದಲ್ಲಿ ಸಂಗ್ರಹಿಸಿ ಸಂಭ್ರಮಿಸುತ್ತಿದ್ದ. ರಾಗಿ, ನವಣೆ, ಜೋಳ, ತೊಗರಿಯಂತಹ ಹಲವು ಬೆಳೆಗಳ ಕಾಳುಗಳನ್ನು ಬೇರ್ಪಡಿಸಲು, ಗುಡಿಸಿ, ಸಾರಿಸಿದ ಜಾಗದಲ್ಲಿ ಬೆಳೆಯನ್ನು ಹೊಂದಿಸಿ ಅದರ ಮೇಲೆ, ರೋಣ್ ಗಲ್ಲನ್ನು (ದುಂಡಾದ ದೊಡ್ಡ ಕಲ್ಲು) ಬಳಸಿ ಎತ್ತಿನ ಸಹಾಯದಿಂದ ಸುಮಾರು ಬಾರಿ ಅದರ ಮೇಲೆ ಒಡಾಡುಸುತ್ತಿದ್ದರು, ಭಾರವಾದ ಕಲ್ಲಿನ ಸ್ಪರ್ಶ ತೆನೆಗೆ ತಾಕಿದಾಗ ತನ್ನ ಬಟ್ಟೆ ಕಳಚಿ ಕಾಳು ಅಂಗಳಕ್ಕೆ ಬೀಳುತ್ತಿತ್ತು.ಬಿದ್ದಿರುವ ಕಾಳನ್ನು ಕಾಪಿಟ್ಟು,ಹೊಕ್ಕಿ ತೂರಿ, ಕೇರಿ ರಾಶಿ ಮಾಡಿ ಅದಕ್ಕೆ ಪೂಜೆ ಸಲ್ಲಿಸಿ ಊರಿನ ದೇವರಿಗೊಂದಿಷ್ಟು ತಗೆದು,ಮನೆಯರಾಗಿ ಕೆಲಸ ಮಾಡಿದ ಆಳುಗಳಿಗೂ ಕಾಳನ್ನು ಕೊಟ್ಟು ಅವರ ತುತ್ತಿನ ಚೀಲವನ್ನು ತುಂಬಿಸುವ ಅನ್ನದಾತನಾಗಿ ಮನತಣಿಸುತ್ತಿದ್ದ.ಮಿಕ್ಕುಳಿದ ಧಾನ್ಯವನ್ನು ಚೀಲವೆಂಬ ಬಟ್ಟೆಯಿಂದ ಹೊದಿಸುತ್ತಿದ್ದ ಅಂದಿನ ನಮ್ಮ ಪ್ರೀತಿಪರ ರೈತ. ಇದರೊಟ್ಟಿಗೆ ತನಗೆ ಅಗತ್ಯವಿರುವಷ್ಟನ್ನು, ತಾನೇ ನಿರ್ಮಿಸಿಕೊಂಡ ಹಗೇವು ಎನ್ನುವ ಸುಸಜ್ಜಿತ ಶೈತ್ಯಾಗಾರದಲ್ಲಿ ಸಂಗ್ರಹಿಸಿ ಭವಿಷ್ಯದ ಹಸಿವಿಗೆ ಆಹಾರವನ್ನಾಗಿ ಒದಗಿಸಿಕೊಳ್ಳುತ್ತಿದ್ದ. ಇಂತಹ ಪ್ರಯಾಸದಾಯಕ ಕಾರ್ಯದಲ್ಲಿ ತೊಡಗಿದ ಅತನ ಮನದಲ್ಲಿಡಗಿದ್ದು ಹಸಿವನ್ನು ನೀಗಿಸುವ ಹಂಬಲ.



ಪ್ರಸ್ತುತ ದಿನಮಾನಗಳಲ್ಲಿ ಕಣಗಳು ಕಳೆದುಹೋಗಿ, ಕರಿ ಡಾಂಬರಿನಿಂದ ಮೇಳೈಸುವ ರಸ್ತೆಯೂ ಒಂದು ರೀತಿ "ಕಣ ಆಕ್ರಮಿತ ಪಥವಾಗಿ" ರೈತನ ಎರಡನೇ ಗೃಹ ಕಣ.ತನ್ನಮೂಲವರ್ಜಿನ್‌ವೊಂದನ್ನುಬದಲಾಯಿಸಿಕೊಂಡಿದೆ. ಆಗಾಗಿ ಕಣದ ಸಂಭ್ರಮ ಕಳೆದುಹೋಗಿದೆ.ಹೊಕ್ಕುವುದು, ತೂರುವುದು ಹಾದಿಗೆ ಬಂದು ತಲುಪಿದೆ,ದವಸಧಾನ್ಯಗಳು ದೊಡ್ಡಲಾರಿಯ ಟಯರ್ ಕೆಳಗಡೆ ಸಿಕ್ಕಿಹಾಕಿಕೊಂಡು ವದ್ದಾಡಿ ಕೊನೆಯುಸಿರುಳುತ್ತವೆ. ಇನ್ನೂ ಕೆಲವು ಸಣ್ಣಪುಟ್ಟ ವಾಹನಗಳಡಿಗೆ ಸಿಕ್ಕೂ ಮಾರಣಾಂತಿಕ ಹಲ್ಲೆಗೆ ಒಳಗಾಗುತ್ತಿವೆ. ಬಹಳಷ್ಟು ಬೆಳೆ ನೇರವಾಗಿ ಗಿರಣಿಯ(ಜಿನ್) ಗೊಡವೆಯಲ್ಲಿ ಇಳಿದು ಭಯಂಕರ ಶಬ್ದದ ನಿನಾಧವನ್ನು ಮಾಡುತ್ತಾ ಸುಂಕವನ್ನು ದಾರಿಗೆ ಚೆಲ್ಲಿ ಜಿನ್ನಿನ ಸಣ್ಣ ಬಾಯಿಂದ ನೇರವಾಗಿ ಚೀಲವನ್ನು ಸೇರುತ್ತವೆ, ಇವರೆಡಕ್ಕೂ ಆಯುಸ್ಸು ಕಡಿಮೆಯಾಗಿದೆ ಎಂಬುದಂತು ಅಕ್ಷರಶ ದಿಟ. ದೊರೆತ ಫಲವೆಲ್ಲಾ ರೈತನ ಮನೆಯನ್ನು ಸಹ ಸೇರದೆ ನೇರವಾಗಿ ಮಾರುಕಟ್ಟೆಗೆ ತಲುಪುತ್ತದೆ. ಇದರಿಂದ ರಾಶಿ ಮಾಡಿ ಸೋಭಾನೆ ಹೇಳುತ್ತಾ ಕಳಸ ಬೆಳಗುವ ಸಂಸ್ಕ್ರತಿ ಮರತೇ ಹೋಯಿತು, ಇದರ ಹೊರತಾಗಿ ಸಂಗ್ರಾಹಕವೆಂಬ ಹಗೇವುಗಳು ಕಣ್ಮರೆಯಾದವು, ಅದರಲ್ಲೂ ಕೆಲವು ಹಗೇವುಗಳಂತೂ ಹಳ್ಳಿಗಳಲ್ಲಿ ನಿರ್ಮಿಸಿದ ಸಿಮೆಂಟ್ ರಸ್ತೆಯ ಅಡಿಯಲ್ಲಿ ಸಿಲುಕಿ ಜೀವಾವಧಿ ಶಿಕ್ಷೆ ಅನುಭವಿಸಿ ಕಣ್ಣು ಮುಚ್ಚಿದವು. ನೂತನ ಪೀಳಿಗೆಗೆ ಇವುಗಳ ಕಲ್ಪನೆಯೂ ಕಷ್ಟವೇ ಸರಿ. ಆದರೂ ಸಾವಯವ ರೀತಿಯಲ್ಲಿ ದೊರಕುತ್ತಿದ್ದ ಧಾನ್ಯಗಳು ಮನುಷ್ಯನ ದೇಹಕ್ಕೊಂದು ಪುಷ್ಟಿಯನ್ನು ಒದಗಿಸುತ್ತಿತ್ತು. ರೈತನ ಮುಖದಲ್ಲೂ ಮಂದಹಾಸ ಮೂಡಿಸುತ್ತಿತ್ತು. ಆ ದಿನಗಳಲ್ಲಿ ಹೆಚ್ಚು ಧಣಿದು ಪಡೆದ ರಾಶಿಯಲ್ಲಿ ಹಂಚಿ ಊಟ ಮಾಡುವ ಗುಣವಿತ್ತು.ಹಸಿವನ್ನ ನೀಗಿಸಿಕೊಂಡವನೂ ಸಹ "ಅನ್ನಧಾತೋ ಸುಖೀಭವ" ಎಂದು ಆರೈಸುತ್ತಿದ್ದನು.





– ಪ್ರದೀಪ ಎಂ ಬಿ
ಕೆ.ಅಯ್ಯನಹಳ್ಳಿ , ಕೊಟ್ಟೂರು

# ವಿದ್ಯಾರ್ಥಿಗಳು ವಿವೇಕ ಸಂದೇಶ ಪಾಲಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಲಹೆ। ವಿಜಯನಗರ ಕಾಲೇಜಿನಲ್ಲಿ 162ನೇ ಸ್ವಾಮಿ ವಿವೇಕಾನಂದ ಜಯಂತಿ, ಯುವದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಭಾರತದ ಅತ್ಯಂತ ಪ್ರಸಿದ್ಧ, ಪ್ರಭಾವ ಶಾಲಿ ತತ್ವಜ್ಞಾನಿಗಳಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರು. ಅವರ ತತ್ವ, ಆದರ್ಶಗಳನ್ನು ಇಂದಿನ ಯುವ ಪೀಳಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಿ ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ರಾಷ್ಟ್ರೀಯ ಸೇವಾ ಯೋಜನೆ, ಯೂತ್ ರೆಡ್ ಕ್ರಾಸ್ ಘಟಕ ಹಾಗೂ ಐಕ್ಯೂಎಸಿ, ಎನ್‌ಸಿಸಿ ರೇಂಜರ್ ಅಂಡ್ ರೋವರ್ಸ್ ಸಹಯೋಗದಲ್ಲಿ ವಿಜಯನಗರ ಕಾಲೇಜಿನ ಸುವರ್ಣ ಭವನದಲ್ಲಿ 162ನೇ ಸ್ವಾಮಿ ವಿವೇಕಾನಂದ ಜಯಂತಿ ಹಾಗು ರಾಷ್ಟ್ರೀಯ ಯುವದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಅಸುಂಡಿ ಬಿ.ನಾಗರಾಜ್ ಗೌಡ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತದ ಇಂದಿನ ಯುವ ಪೀಳಿಗೆ ಸ್ವಾಮಿ



ವಿವೇಕಾನಂದರ ಜವನ ಸಂದೇಶ ಹಿಂದೆಂದಿಗಿಂತಲೂ ಇಂದು ಹೆಚ್ಚು ಮಹತ್ವ ಎನಿಸಿವೆ. ಅವರ ಸಂದೇಶಗಳನ್ನು ಪಾಲಿಸುವ ಮೂಲಕ ಉತ್ತಮ ಪ್ರಜೆಗಳಾಗಿ, ಜೀವನನ್ನು ಸಾರ್ಥಕಗೊಳಿಸಬೇಕು ಎಂದು ಸಲಹೆ ನೀಡಿದರು.

ಶಾರದಾ ಮಠದ ಮಾತಾ ಪ್ರಮೋದ ಮಯಿ ಸನ್ನಿಧ್ಯವಹಿಸಿ ಸ್ವಾಮಿ ವಿವೇಕಾನಂದರ ಬಗ್ಗೆ ವಿಶೇಷ ಉಪನ್ಯಾಸವನ್ನು ನೀಡಿದರು. ಹೊಸಪೇಟೆ ಸಂಚಾರಿ ಪೊಲೀಸ್ ಠಾಣೆಯ ಪೇದೆ ಶೇಖರ್‌ಗೌಡ ಅವರು ಸಂಚಾರಿ ನಿಯಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ಮೂಡಿಸಿದರು.

ಭಾರತೀಯ ರೆಡ್ ಕ್ರಾಸ್ ಕಾರ್ಯದರ್ಶಿ ಅನ್ನಪೂರ್ಣಮ್ಮ, ಕಾಲೇಜಿನ ಪ್ರಾಚಾರ್ಯ ಸುಭಾಷ್ ಟಿ., ಎನ್ ಎಸ್ ಎಸ್ ಅಧಿಕಾರಿ ಡಾ.ವೀರೇಶ್ ಟಿ.ಎಂ., ರವಿಕಿರಣ್ ಡಿ., ಭಾರತೀಯ ರೆಡ್ ಕ್ರಾಸ್ ಅಧಿಕಾರಿಗಳಾದ ಕೆ.ರವಿಶಂಕರ್, ಶ್ರೀನಿವಾಸ್, ಎನ್‌ಸಿಸಿ ಅಧಿಕಾರಿ ಪ್ರಭುಸ್ವಾಮಿ ಟಿ.ಎಂ., ರೇಂಜರ್ ಅಂಡ್ ರೋವರ್ಸ್ ಅಧಿಕಾರಿ ಶಿವಮಲ್ಲಿಕಾರ್ಜುನ ಉಪಸ್ಥಿತರಿದ್ದರು.

# ನಿರಂತರ ಅಭ್ಯಾಸದಿಂದ ಭೌದ್ಧಿಕ ಮಟ್ಟ ಉತ್ತಮ

## ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಹೇಳಿಕೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜ್ ಪ್ರೌಢಶಾಲೆಯಲ್ಲಿ ಶುಕ್ರವಾರ ಎಸ್‌ಎಸ್‌ಎಲ್ ಸಿ ವಿಧ್ಯಾರ್ಥಿಗಳಿಗೆ ಫಲಿತಾಂಶ ಸುಧಾರಣಾ ಉದ್ದೇಶದಿಂದ ರಸಪ್ರಶ್ನೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಕಾರ್ಯಕ್ರಮದ ಕುರಿತು ಮಾತನಾಡಿ, ಪ್ರಸಕ್ತ ಸಾಲಿನ ಹತ್ತನೆ ತರಗತಿ ವಿಧ್ಯಾರ್ಥಿಗಳಿಗೆ ಪಠ್ಯದ ವಿಷಯಗಳ ಕುರಿತು ಆಯ್ದ ಪ್ರಶ್ನೆಗಳನ್ನು ಕೇಳಲಾಗುತ್ತದೆ ಇದರಿಂದ ವಿಧ್ಯಾರ್ಥಿಗಳು ಆಯಾ ವಿಷಯದ ಕುರಿತು ಅಭ್ಯಾಸ ಮಾಡಲು ಪ್ರೇರೇಪಿಸಿದಂತಾಗುತ್ತದೆ ಇದರಿಂದ ವಿಧ್ಯಾರ್ಥಿಗಳ ಭೌದ್ಧಿಕ ಮಟ್ಟ ಉತ್ತಮವಾಗುವ ಜತೆ ಸಂಭಂದಿಸಿದ ವಿಷಯಗಳ ಕುರಿತು ಮನನ ಮಾಡಿದಂತಾಗುತ್ತದೆ. ಇದರಿಂದ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಉತ್ತೇಜಿಸಿದಂತಾಗುತ್ತದೆ ಎಂದು ತಿಳಿಸಿದರು.

ಪ್ರತಿ ಶುಕ್ರವಾರ ವಿಧ್ಯಾರ್ಥಿಗಳಿಗೆ ಗುಂಪುಗಳನ್ನ ವಿಗಂಡಿಸಿ ತರಗತಿ ವಿಷಯಗಳನ್ನ ಮೊದಲೇ ತಿಳಿಸಿ ನಂತರ ಪ್ರಶ್ನೆಗಳನ್ನು ಕೇಳಲಾಗುವುದು ಇದರಿಂದಾಗಿ ವಿಧ್ಯಾರ್ಥಿಗಳಿಗೆ ಕಲಿಯುವ ಆಸಕ್ತಿ ಮೂಡಿದಂತಾಗುತ್ತದೆ. ಗುಂಪುಗಳಲ್ಲಿ ಪ್ರಶ್ನೆ ಕುರಿತು ಚರ್ಚಿಸಿ ಉತ್ತರವನ್ನು ಸಹ ನೀಡಿದರೆ ಅದು ಅವರ ನೆನಪಿನ ಶಕ್ತಿಯಲ್ಲಿ ಉಳಿಯಲು ಸಹಾಯವಾಗುತ್ತದೆ.ಆ ನಿಟ್ಟಿನಲ್ಲಿ ವಿಧ್ಯಾರ್ಥಿಗಳ ಜ್ಞಾನಾರ್ಜನೆಗೆ ಈ ರಸಪ್ರಶ್ನೆ ಕಾರ್ಯಕ್ರಮ ಸಹಕಾರಿಯಾಗುವುದಲ್ಲದೆ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ಸಾಧ್ಯ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಶಿಕ್ಷಕ ಕೆಪಿಎಂ ಶಿವಸ್ವಾಮಿ ವಿಧ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಿಕೊಟ್ಟರು. ಮುಖ್ಯಶಿಕ್ಷಕ ಟಿ.ಬಸವರಾಜ, ಶಿಕ್ಷಕರಾದ ಕೆಪಿಎಂ ಶಿವಸ್ವಾಮಿ, ರುದ್ರಪ್ಪ, ಉಡುಚಪ್ಪ, ಭಾಸ್ಕರ ನಾಯ್ಕ್, ಗೀತಾ, ರೋಜರಾಣಿ, ರಾಜೇಶ್ವರಿ, ಸುನೀತ, ಗಜಾಪುರ ಹನುಮಂತಪ್ಪ ಇದ್ದರು.

ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಎಸ್‌ಎಸ್‌ಎಲ್ ಸಿ ವಿಧ್ಯಾರ್ಥಿಗಳಿಗೆ ಪರೀಕ್ಷಾ ಸುಧಾರಣೆಗಾಗಿ ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು. ಮುಖ್ಯಶಿಕ್ಷಕ ಟಿ.ಬಸವರಾಜ, ಶಿಕ್ಷಕರಾದ ರುದ್ರಪ್ಪ, ಉಡುಚಪ್ಪ, ಭಾಸ್ಕರ ನಾಯ್ಕ್, ಗೀತಾ, ರೋಜರಾಣಿ, ರಾಜೇಶ್ವರಿ, ಸುನೀತ, ಗಜಾಪುರ ಹನುಮಂತಪ್ಪ ಇದ್ದರು.

# ರಾಷ್ಟ್ರೀಯ ಉಪಶಮನ ಆರೈಕೆ (ಪ್ಯಾಲೆಟಿವ್ ಕೇರ್)

## ಗ್ರಾಮೀಣ ಪ್ರದೇಶದಲ್ಲಿನ ಹಿರಿಯರಿಗೆ ಮನೆಯಲ್ಲಿ ಸೇವೆ

**ಹಂಪಿ ಟೈಮ್ಸ್ ಬಳ್ಳಾರಿ**

ಹಾಸಿಗೆ ಹಿಡಿದು ಆರೈಕೆಗಾಗಿ ಇನ್ನೊಬ್ಬರ ಸಹಾಯದ ಅಗತ್ಯತೆ ಇರುವ ಕುಟುಂಬದ ಹಿರಿಯ ಸದಸ್ಯರಿಗೆ ಮಾನಸಿಕವಾಗಿ ಬೆಂಬಲ ನೀಡುವ ಕಾರ್ಯವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸರ್ಕಾರದ ಮಾರ್ಗದರ್ಶನದ ಅಡಿಯಲ್ಲಿ ರಾಷ್ಟ್ರೀಯ ಉಪಶಮನ ಆರೈಕೆ (ಪ್ಯಾಲೆಟಿವ್ ಕೇರ್) ಕಾರ್ಯಕ್ರಮದ ಮೂಲಕ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸೇವೆಯನ್ನು ನೀಡುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದು ಕುಟುಂಬದ ಹಿರಿಯ ಸದಸ್ಯರ ಆರೈಕೆಯ ಸಹಾಯ ಪಡೆಯಿರಿ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅಧಿಕಾರಿ ಡಾ.ವೈ.ರಮೇಶ್ ಬಾಬು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಪೆಲೆಟಿವ್ ಕೇರ್ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ 97 ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಸಮುದಾಯ ಆರೋಗ್ಯ ಅಧಿಕಾರಿ (ಸಿಹೆಚ್‌ಓ) ರವರ ಮೂಲಕ ಮನೆ ಭೇಟಿ ಮಾಡಲಿದ್ದಾರೆ.

ಹಾಸಿಗೆ ಹಿಡಿದ ಕುಟುಂಬದ ಹಿರಿಯ ಸದಸ್ಯರಿಗೆ ಸ್ಥಳದಲ್ಲಿಯೇ ರಕ್ತದೊತ್ತಡ ಪರೀಕ್ಷೆ, ಸಕ್ಕರೆ ಕಾಯಿಲೆ ಪರೀಕ್ಷೆ ಕೈಗೊಳ್ಳುವ ಮೂಲಕ ಅಗತ್ಯ ಇರುವ ಔಷಧೋಪಚಾರವನ್ನು ಮಾಡಲಾಗುವುದು ಮತ್ತು ಫಿಜಿಯೋಥೆರಫಿ ಅವಶ್ಯಕತೆ ಇರುವವರಿಗೆ ಕುಟುಂಬದ ಸದಸ್ಯರ ಸಮ್ಮತದೊಂದಿಗೆ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಎನ್.ಸಿ.ಡಿ ವಿಭಾಗದ ತಜ್ಞ ವೈದ್ಯ ಡಾ. ಫಣಿರಾಜ್ ಅವರಿಂದ ಸೇವೆಯನ್ನು ಸಹ ನೀಡಲಾಗುತ್ತಿದೆ.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ ಹಾಗೂ ಜಿಲ್ಲಾ ಎನ್.ಸಿ.ಡಿ ಕಾರ್ಯಕ್ರಮ ಸಂಯೋಜಕರಾದ ಡಾ.ಜಬೀನ್ ತಾಜ್ ಅವರ ಮೇಲ್ವಿಚಾರಣೆಯೊಂದಿಗೆ ಜಿಲ್ಲೆಯಲ್ಲಿ ಕಾರ್ಯಕ್ರಮದ ಅನುಷ್ಠಾನವನ್ನು ಪರಿಣಾಮಕಾರಿಯಾಗಿ ಮಾಡಲಾಗುತ್ತಿದ್ದು, ಕುಟುಂಬದ ಸದಸ್ಯರಲ್ಲಿ ದೀರ್ಘಾವಧಿ ಕಾಯಿಲೆಗಳಿಂದ ಹಾಗೂ ಅಂಗಾಂಗ ವೈಫಲ್ಯದಿಂದ ಬಳಲುತ್ತಿರುವವರಿಗೆ ಮತ್ತು ಹಾಸಿಗೆ ಹಿಡಿದ ಮಾನಸಿಕ ರೋಗಿಗಳಿಗೂ ಸಹ ಆರೈಕೆ ಮಾಡಲಾಗುತ್ತಿದೆ. ಸಾರ್ವಜನಿಕರು ಈ ದಿಶೆಯಲ್ಲಿ ಹತ್ತಿರದ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಡಿಹೆಚ್‌ಓ ಡಾ.ವೈ.ರಮೇಶ್ ಬಾಬು ಅವರು ವಿನಂತಿಸಿದ್ದಾರೆ.




# ವ್ಯಕ್ತಿತ್ವ ವಿಕಸನವಾದ್ರೆ ಭಾರತ ಸದೃಢ

## ಉಪನ್ಯಾಸಕ ನಾಗರಾಜ ಕೊಟ್ರಪ್ಪನವರ್ ಹೇಳಿಕೆ। ರಾಷ್ಟ್ರೀಯ ಯುವದಿನಾಚರಣೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಗುಡೇಕೋಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಉಪನ್ಯಾಸಕರ ಸಂಘ ಹಾಗೂ ಗುಡೇಕೋಟೆ ಸರ್ಕಾರಿ ಪದವಿ ಕಾಲೇಜು ವತಿಯಿಂದ ರಾಷ್ಟ್ರೀಯ ಯುವದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕ ನಾಗರಾಜ ಕೊಟ್ರಪ್ಪನವರ್ ಮಾತನಾಡಿ, ಭಾರತದ ಭವಿಷ್ಯದ ರುವಾರಿಗಳಾದ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವಾದರೆ ಸಧೃಢ ಭಾರತ ನಿರ್ಮಾಣ ಸಾಧ್ಯ, ನಿಮ್ಮ ವ್ಯಕ್ತಿತ್ವ ವಿಕಸನವಾಗಬೇಕಾದರೆ ಸ್ವಾಮಿ ವಿವೇಕಾನಂದ ಜೀವನ ಚರಿತ್ರೆ ತಿಳಿಯಲೇಬೇಕು, ಸಿಡಿಲ ಸಂತ ಎಂದೇ ಹೆಸರಾದ ಸ್ವಾಮಿ ವಿವೇಕಾನಂದರಿಂದ ಸಾವಿರಾರು ಜನ ಸ್ಫೂರ್ತಿ ಪಡೆದಿದ್ದಾರೆ, ಅದೇರೀತಿ ಯುವಕರು ಜಾಗೃತರಾಗಲೆಂದು ಪ್ರತೀ ವರ್ಷ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವದಿನ ಎಂದು ಆಚರಿಸಲಾಗುತ್ತದೆ ಎಂದು ತಿಳಿಸಿದರು.



ಸ್ವಾಮಿ ವಿವೇಕಾನಂದರು ಭಾರತಕ್ಕೆ ಮಾತ್ರವಲ್ಲದೇ ಪ್ರಪಂಚದ ಇತರೆ ದೇಶಗಳಿಗೂ ಸಹ ಅವರ ತತ್ವಗಳು, ಬದುಕಿದ ಹಾದಿ, ಯುವ ಜನತೆಗೆ ನೀಡಿದ ಸ್ಫೂರ್ತಿಯ ಕರೆಗಳಿಂದ ಅವರು ಇಂದಿಗೂ ಎಂದೆಂದಿಗೂ ಪ್ರಪಂಚದ ಆಧ್ಯಾತ್ಮಿಕ ಗುರು. ಆದರ್ಶ ವ್ಯಕ್ತಿಯೇ ಎಂದು ತಿಳಿಸಿದರು. ಇದೇ ಸಂಧರ್ಭದಲ್ಲಿ ವಿಧ್ಯಾರ್ಥಿಗಳಿಗೆ ವಿವೇಕಾನಂದರ ಜೀವನ ಚರಿತ್ರೆ ಕುರಿತು ಪ್ರಬಂಧ,ವಿವೇಕಾನಂದರು ಯುವಕರಿಗೆ ಹೇಗೆ ಮಾದರಿ ಯಾಗಬಲ್ಲರು ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು.ಸ್ಪರ್ಧೆಯಲ್ಲಿ ಗೆದ್ದ ವಿಧ್ಯಾರ್ಥಿಗಳಿಗೆ ನೋಟ್ ಪುಸ್ತಕ,ವಿವೇಕಾನಂದರ ಜೀವನ ಚರಿತ್ರೆ ಪುಸ್ತಕ,ಪೆನ್ ಹಾಗೂ ಕೈ ಗಡಿಯಾರಗಳನ್ನ ಬಹುಮಾನವಾಗಿ ನೀಡಲಾಯಿತು.

ಉಪನ್ಯಾಸಕರಾದ ಸಿದ್ದಲಿಂಗಯ್ಯ, ರಾಜೇಶ್, ಚಿದಾನಂದ,ಬಸವರಾಜ್, ನಳಿನ, ಮತ್ತು ಗುರುರಾಜ್ ಭಂಡಾರಿ ಇದ್ದರು.

ತಾಲೂಕಿನ ಗುಡೇಕೋಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ತಾಲೂಕು ಉಪನ್ಯಾಸಕರ ಸಂಘ ಹಾಗೂ ಗುಡೇಕೋಟೆ ಸರ್ಕಾರಿ ಪದವಿ ಕಾಲೇಜು ವತಿಯಿಂದ ರಾಷ್ಟ್ರೀಯ ಯುವದಿನ ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ವಿಧ್ಯಾರ್ಥಿಗೆ ಬಹುಮಾನ ವಿತರಿಸುತ್ತಿರುವ ಉಪನ್ಯಾಸಕ ನಾಗರಾಜ ಕೊಟ್ರಪ್ಪನವರ್. ಉಪನ್ಯಾಸಕರಾದ ಸಿದ್ದಲಿಂಗಯ್ಯ, ರಾಜೇಶ್, ಚಿದಾನಂದ,ಬಸವರಾಜ್ ಇದ್ದರು.

**ಮೈಕ್ರೋ ನ್ಯೂಸ್**

# ಪಡಿತರ ಚೀಟಿದಾರರು ಅನ್ಯಭಾಗ್ಯ ಯೋಜನೆಯ ಹಣ ಪಡೆಯಲು ದಾಖಲೆ ಪರಿಶೀಲಿಸಿಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ ಅಕ್ಕಿಯ ಬದಲು ರೂ.34 ರಂತೆ ನೇರ ನಗದು ಪಾವತಿಯಾಗದ ಫಲಾನುಭವಿಗಳು ಹಣ ಬರಲು ಪೂರಕ ಪರಿಶೀಲಿಸಿಕೊಳ್ಳಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ಸಕೀನಾ ತಿಳಿಸಿದ್ದಾರೆ.

**ಫಲಾನುಭವಿಗಳು ಪರಿಶೀಲಿಸಬೇಕಾದ ದಾಖಲೆಗಳು:** ಪಡಿತರ ಚೀಟಿದಾರರು ತಮ್ಮ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಹೆಸರು ಮತ್ತು ಅವರ ಆಧಾರ್ ಕಾರ್ಡ್‌ನಲ್ಲಿ ಹೆಸರು ಸರಿಯಾಗಿದೆಯೇ ಪರೀಕ್ಷಿಸಿಕೊಳ್ಳಬೇಕು. ಇಲ್ಲವಾದಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಇ-ಕೆವೈಸಿ ಮಾಡಿಸಿಬೇಕು. ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಿಸಿರಬೇಕು ಹಾಗೂ ಬ್ಯಾಂಕ್ ಖಾತೆಗೆ ಇ-ಕೆವೈಸಿ ಮಾಡಿಸಬೇಕು.

ಬ್ಯಾಂಕ್ ಖಾತೆ ಸರಿಯಿಲ್ಲದಿದ್ದರೆ ಹೊಸದಾಗಿ ಅಂಚೆ ಕಚೇರಿಯಲ್ಲಿ (ಪೋಸ್ಟ್ ಆಫೀಸ್) ಹೊಸ ಐ.ಬಿ.ಪಿ.ಬಿ ಖಾತೆ ತೆರೆಯಬೇಕು. ಮೇಲ್ಕಂಡ ಎಲ್ಲಾ ಅಂಶಗಳು ಸರಿಯಾಗಿದ್ದಲ್ಲಿ ತಮ್ಮ ಖಾತೆಗೆ ಹಣ ಜಮೆಯಾಗಲಿದೆ. ಅರ್ಹರು ಈ ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ತಾಲ್ಲೂಕಿನ ಆಹಾರ ಇಲಾಖೆ ಹಾಗೂ ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರ ಕಚೇರಿ ಅಥವಾ ದೂ.08392-272557 ಗೆ ಸಂಪರ್ಕಿಸಬೇಕು ಎಂದು ತಿಳಿಸಿದ್ದಾರೆ.

# ಕನಿಷ್ಠ ಬೆಂಬಲ ಯೋಜನೆಯಡಿ ಭತ್ತ ನೋಂದಣಿ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ 2023-24 ನೇ ಸಾಲಿನ ಮುಂಗಾರು ಋತುವಿನಲ್ಲಿ ಬೆಳೆದ ಭತ್ತವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನೋಂದಣಿಗೆ 2023ರ ಡಿ.31ರ ವರೆಗೆ ಕಾಲವಕಾಶ ನಿಗಧಿಪಡಿಸಲಾಗಿತ್ತು. ರಾಜ್ಯದಲ್ಲಿ 2.5 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಸಬೇಕಾಗಿರುವುದರಿಂದ ಪ್ರಸ್ತುತ ಸರ್ಕಾರವು ಭತ್ತ ನೋಂದಣಿ ಅವಧಿಯನ್ನು ಮಾ.31 ರ ವರೆಗೆ ವಿಸ್ತರಿಸಿ ಆದೇಶಿಸಿದೆ.

ಸರ್ಕಾರವು ರಾಜ್ಯದಲ್ಲಿ 2.5 ಲಕ್ಷ ಮೆ. ಟನ್ ಗುರಿ ತಲುಪುವವರೆಗೆ ನೋಂದಣಿ ಕೈಗೊಳ್ಳಲು ಸೂಚಿಸಿದ್ದರಿಂದ, ರೈತರು ತಕ್ಷಣವೇ ನೋಂದಣಿ ಮತ್ತು ಖರೀದಿಯ ಉಪಯೋಗವನ್ನು ಸದುಪಯೋಗಪಡಿಸಿಕೊಳ್ಳಬೇಕು.

ನೋಂದಣಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಖರೀದಿ ಏಜೆನ್ಸಿಯಾದ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಅಥವಾ ಮೊ.9686935278 ಹಾಗೂ ಆಯಾ ತಾಲ್ಲೂಕಿನ ಖರೀದಿ ಕೇಂದ್ರಗಳ ಖರೀದಿ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಸಕೀನಾ ತಿಳಿಸಿದ್ದಾರೆ.

# ಜ.17 ರಂದು ಕೊಪ್ಪಳದಲ್ಲಿ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ:**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2023-24ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಜನವರಿ 17 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜನಪರ ಉತ್ಸವ ಅಂಗವಾಗಿ ಕಲಾವಿದರು ಹಾಗೂ ಕಲಾತಂಡಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA